ಬೆಲೆ ರೂ.2.50
D.O.P - 15th of every month at Udupi Sorting Office




# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2016

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-16 ಸಂಚಿಕೆ-6 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶಾರದಾ ಮಂಟಪದಲ್ಲಿ ಶಂಕರ ಜಯಂತಿ ಹಾಗೂ ಉಪನಯನ



ವೈಶಾಖ ಮಾಸ ಶುದ್ಧ ಪಂಚಮಿಯ ದಿನವು ಶ್ರೀ ಶ್ರೀ ಶಂಕರಾಚಾರ್ಯರು ಧರ್ಮೋದ್ಧಾರಕ್ಕಾಗಿ ಭುವಿಯಲ್ಲಿ ಅವತಾರವೆತ್ತಿದ ದಿನ. ಈ ವರ್ಷ ಮೇ ತಿಂಗಳ ಬುಧವಾರ 11ನೇ ತಾರೀಖು ಈ ಶುಭದಿನವಾಗಿತ್ತು. ಅಂದು ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಶ್ರೀ ಶಂಕರ ಜಯಂತಿಯನ್ನು ಸಂಭ್ರಮ ಹಾಗೂ ಭಕ್ತಿಯಿಂದ ಆಚರಿಸಲಾಯಿತು. ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ಅಧ್ಯಕ್ಷರಾಗಿರುವ ಜ್ಞಾನಭಾರತೀ ಸಂಸ್ಥೆ ಹಾಗೂ ಶ್ರೀ ಯು. ಪ್ರಫುಲ್ಲಚಂದ್ರರಾಯರು ಸಂಚಾಲಕರಾಗಿರುವ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನಂ ಇವರುಗಳೂ ಈ ಕಾರ್ಯಕ್ರಮದಲ್ಲಿ ಸಹಭಾಗಿಯಾಗಿದ್ದರು.

ಶಂಕರ ಜಯಂತಿಯ ದಿನವು ಉಪನೀತನಾಗುವ ವಟುವಿಗೆ ಬ್ರಹ್ಮೋಪದೇಶಕ್ಕೆ ಅತ್ಯುತ್ತಮವಾದ ದಿನವೂ ಹೌದು. ಹಾಗಾಗಿ ನಮ್ಮ ಸಂಘವು ನಮ್ಮ ಸಮಾಜ ಬಾಂಧವರಿಗಾಗಿ ಆ ದಿನದಂದು ಸಾಮೂಹಿಕ ಉಪನಯನದ ಕಾರ್ಯಕ್ರಮವನ್ನು ಪ್ರತೀ ವರ್ಷವೂ ಏರ್ಪಡಿಸುತ್ತಿದೆ. ಈ ವರ್ಷವೂ ಓರ್ವ ವಟುವಿಗೆ ಉಪನಯನ ಕಾರ್ಯಕ್ರಮವನ್ನು ನಮ್ಮ ಸಂಘದ ವತಿಯಿಂದ ಏರ್ಪಡಿಸಲಾಗಿತ್ತು

ಅಂದು ಬೆಳಿಗ್ಗೆ ಎಂಟುಗಂಟೆಗೆ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರ ಪೌರೋಹಿತ್ಯದಲ್ಲಿ, ಸಂಘದ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ , ಬ್ರಹ್ಮೋಪದೇಶ ಕಾರ್ಯಕ್ರಮವು ಆರಂಭವಾಯಿತು. ನಂತರ ಸುಮಾರು ಹನ್ನೊಂದು ಗಂಟೆಗೆ ಜ್ಞಾನಮಂದಿರದಲ್ಲಿ ಶ್ರೀ ಶ್ರೀ ಶಂಕರಾಚಾರ್ಯರ ಚಿತ್ರದ ಮುಂದೆ ದೀಪ ಬೆಳಗಿಸಿ ಸಭಾ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಶ್ರೀ ವೈ.ಭುವನೇಂದ್ರ ರಾಯರು ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಜ್ಞಾನಭಾರತೀ ಸಂಸ್ಥೆಯ ಶ್ರೀ ಉಪ್ಪಂಬಳ ರಾಮ ಭಟ್, ಹಾಗೂ ಅದರ ಕಾರ್ಯದರ್ಶಿ ಶ್ರೀ ಎಸ್ . ಎಲ್. ಕಾರ್ಣಿಕ್ ವೇದಿಕೆಯಲ್ಲಿದ್ದರು. ಪ್ರವಚನಕಾರರಾಗಿ ಆಗಮಿಸಿದ ಕಟೀಲಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸೊಂದಾ ಭಾಸ್ಕರ ಭಟ್ಟರು "ಆದಿಶಂಕರರು : ಜೀವನ ಸಂದೇಶ" ಎಂಬ ವಿಷಯದ ಮೇಲೆ ಪ್ರವಚನವನ್ನು ನೀಡಿದರು. ಶ್ರೀ ಶಂಕರಾಚಾರ್ಯರು ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದ ಮೊದಲ ಆಚಾರ್ಯರು ಎಂದು ಅವರು ವರ್ಣಿಸಿದರು. ಮುಂದೆ ಜನಿಸಿದ ಆಚಾರ್ಯರೆಲ್ಲರೂ ಇದನ್ನೇ ಮೂಲವಾಗಿಟ್ಟುಕೊಂಡು ತಮ್ಮ ಸಿದ್ಧಾಂತವನ್ನು ಮಂಡಿಸಿದರೆಂದರು.

ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರ ರಾಯರು ಶ್ರೀ ಶಂಕರಾಚಾರ್ಯರು ಉಪನಿಷತ್ತುಗಳ ಸಾರವೇ ಆದ ಅದ್ವೈತ ವನ್ನು ಈ ಜಗತ್ತಿಗೆ ತಿಳಿ ಹೇಳಿ ಈ ಜಗತ್ತಿನ ಕಣ್ಣು ತೆರೆಸಿದ ಮಹಾಮಹಿಮರೆಂದು ಅವರನ್ನು ಸ್ಮರಿಸಿದರು. ತತ್ವಜ್ಞಾನಿಗಳಿಗೆ ಸರಿಯಾದ ತರ್ಕದ ದಾರಿ ತೋರಿಸಿದುದರಿಂದ ಅವರ ಜನ್ಮದಿನವನ್ನು ತತ್ವಜ್ಞಾನಿಗಳ ದಿನವೆಂದು ಕರ್ನಾಟಕ ಸರಕಾರ ಘೋಷಿಸಿದ್ದು ಅನ್ವರ್ಥವಾಗಿಯೇ ಇದೆ ಎಂದು ನುಡಿದರು. ನಂತರ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನಂ ನಲ್ಲಿ ವಿಶೇಷವಾಗಿ ಕಾರ್ಯನಿರ್ವಹಿಸಿದ ಶ್ರೀ ಯು. ಪ್ರಫುಲ್ಲಚಂದ್ರ ರಾಯರು ಹಾಗೂ ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್ ರವರನ್ನು ಅಭಿನಂದಿಸಲಾಯಿತು. ಶ್ರೀ ಎಸ್ .ಎಲ್ ಕಾರಣಿಕ್ ಧನ್ಯವಾದ ಸಮರ್ಪಿಸಿದರು. ಶ್ರೀ ಮಟ್ಟು ಕೃಷ್ಣಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಂಕರ ಜಯಂತಿಯ ಹಿಂದಿನ ದಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಿಳಾವೇದಿಕೆಯ ಸದಸ್ಯರಿಂದ ಅಖಂಡ ಸೌಂದರ್ಯ ಲಹರೀ ಪಾರಾಯಣ ಕಾರ್ಯಕ್ರಮವಿತ್ತು.

ಸಭಾ ಕಾರ್ಯಕ್ರಮದ ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿರುವ ಶ್ರೀ ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಮಹಾಪೂಜೆಯನ್ನು ಶ್ರೀ ಜಗದೀಶ ಉಪಾಧ್ಯಾಯರು ನೆರವೇರಿಸಿ ಸಮಾಜದ ಅಭಿವೃದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ನಂತರ ಆಗಮಿಸಿದವರೆಲ್ಲರೂ ಭೋಜನ ಪ್ರಸಾದವನ್ನು ಸ್ವೀಕರಿಸಿದರು. ಅಂದು ಸಂಜೆ ಉಡುಪಿಯ ಪರಿಸರದಲ್ಲಿ ತಂಪಾದ ಗಾಳಿಯೊಂದಿಗೆ ಈ ವರ್ಷದ ಮೊದಲ ಮಳೆಯಾದದ್ದು ಆಚಾರ್ಯರು ನಮ್ಮೆಲ್ಲರನ್ನು ಹರಸಿದಂತಿತ್ತು.

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ಶೃಂಗೇರಿ ಶ್ರೀ ಶ್ರೀಗಳ ಭೇಟಿ



ಮಠದಬೆಟ್ಟು ಶ್ರೀರಾಜರಾಜೇಶ್ವರೀ ದೇವಸ್ಥಾನಕ್ಕೆ ಏ.24 ರಂದು ಸಂಜೆ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಂದಾನಂಗಳವರನ್ನು ಶ್ರೀ ದೇವಳದ ತಂತ್ರಿಗಳಾದ ಬ್ರಹ್ಮ ಶ್ರೀ ವೇದಮೂರ್ತಿ ವಾಗೀಶ ಶಾಸ್ತ್ರಿ, ಶ್ರೀ ದೇವಳದ ಅರ್ಚಕರಾದ ಎಂ. ನಾಗೇಶ ಶರ್ಮ, ಬ್ರಹ್ಮ ಕಲಶೋತ್ಸವದ ಅಧ್ಯಕ್ಷರಾದ ಎನ್.ಕೆ.ಜಗನ್ನಿವಾಸ ರಾವ್ ಹಾಗೂ ಸಮಾಜ ಬಾಂಧವರು, ಊರ ಪರವೂರ ಭಕ್ತಾಧಿಗಳು ಉಭಯ ಶ್ರೀಗಳನ್ನು ಪೂರ್ಣಕುಂಭ, ವಾದ್ಯ,ವೇದ ಘೋಷಗಳೊಂದಿಗೆ ಶ್ರೀ ದೇವಳಕ್ಕೆ ಬರಮಾಡಿ ಕೊಂಡರು. ಉಭಯ ಶ್ರೀಶ್ರೀಗಳು ಶ್ರೀ ರಾಜರಾಜೇಶ್ವರೀ ದೇವಿಯ ಮಂಗಳಾರತಿ ವೀಕ್ಷಿಸಿ, ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಶ್ರೀ ರಾಜರಾಜೇಶ್ವರೀ ದೇವಿಗೆ ಜಗದ್ಗುರುಗಳು ಸೀರೆಯೊಂದನ್ನು ಸಮರ್ಪಿಸಿದರು. ನಂತರ ಶಂಕರಾಚಾರ್ಯ ವೇದಿಕೆಯಲ್ಲಿ ಉಭಯ ಶ್ರೀಶ್ರೀಗಳು ಪೀಠದಲ್ಲಿ ಆಸೀನರಾಗಿ ನೆರೆದ ಭಕ್ತ ವರ್ಗಕ್ಕೆ ಆಶೀರ್ವಚನ ನೀಡಿ ಫಲ ಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು.

ಶ್ರೀ ದೇವಳದ ಆಡಳಿತ ಮಂಡಳಿಯ ಸದಸ್ಯರು, ಜೀರ್ಣೋದ್ಧಾರ ಸಮಿತಿಯ ಸದಸ್ಯರು, ಬ್ರಹ್ಮ ಕಲಶೋತ್ಸವ ಸಮಿತಿಯ ಸದಸ್ಯರು, ಶ್ರೀ ಮಹಿಷ ಮರ್ದಿನಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು ಇದರ ಸದಸ್ಯರು, ಸುಬ್ರಹ್ಮಣ್ಯ ಸ್ಥಾನಿಕ ಸಂಘ ಬೆಳ್ತಂಗಡಿ, ಸ್ಥಾನಿಕ ಬ್ರಾಹ್ಮಣ ಸಂಘ ಸುಳ್ಯ ಇದರ ಸದಸ್ಯರು, ಊರ-ಪರವೂರ ವಿವಿಧ-ಸಂಘ ಸಂಸ್ಥೆಗಳ ಅಧ್ಯಕ್ಷರುಗಳು ಮತ್ತು ಸದಸ್ಯರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಪಾದೆಬೆಟ್ಟಿನಲ್ಲಿ ವೈದಿಕ ಶಿಬಿರದ ಸಮಾರೋಪ



ತಾ.1-5-2016ರಿಂದ ತಾ.14-5-2016ರ ತನಕ ವೈದಿಕ ಶಿಬಿರವು ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನೆರವೇರಿತು. ಈ ಶಿಬಿರದಲ್ಲಿ ಮೂವತ್ತು ಮಂದಿ ವಟುಗಳಿಗೆ ಹದಿನಾಲ್ಕು ದಿನಗಳ ಕಾಲ ಊಟ ವಸತಿಯೊಂದಿಗೆ ಸಂಧ್ಯಾವಂದನೆ, ನಿತ್ಯಪೂಜಾವಿಧಿಗಳನ್ನು ಕಲಿಸುವುದರ ಜೊತೆಗೆ ಪ್ರಾಥಮಿಕ ವೇದಾಭ್ಯಾಸದ ಶಿಕ್ಷಣವನ್ನು ನೀಡಲಾಯಿತು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಹಾಗೂ ಬ್ರಹ್ಮಶ್ರೀ ಕೃಷ್ಣರಾಜ ಭಟ್ ಇವರು ಮಕ್ಕಳಿಗೆ ಮುತುವರ್ಜಿಯಿಂದ ಶಿಕ್ಷಣ ನೀಡಿದ್ದರು. ಪ್ರತೀದಿನ ಸಂಜೆ ಮಕ್ಕಳಿಗೆ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ದೇವರಾಜ ಶರ್ಮರು ಮಹಾಭಾರತ , ರಾಮಾಯಣ ಹಾಗೂ ಇತರ ಪುರಾಣ ಕಥೆಗಳನ್ನು ರಂಜನೀಯವಾಗಿ ಹೇಳಿ ಕಲಿಸುತ್ತಿದ್ದರು.

ತಾ 14-05-2016ರ ಶನಿವಾರ ಈ ಶಿಬಿರದ ಸಮಾರೋಪ ಕಾರ್ಯಕ್ರಮವು ಜರಗಿತು. ವೇದಿಕೆಯಲ್ಲಿ ಈ ಶಿಬಿರದ ರೂವಾರಿಗಳಾದ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿಯ ಗೌರವಾಧ್ಯಕ್ಷರಾದ ಪಿ.ಬಿ.

(4ನೇ ಪುಟಕ್ಕೆ...)

# ಸಂಪಾದಕೀಯ.....

- ಡಾ| ವೈ. ಸುದರ್ಶನ್ ರಾವ್

ಒಂದು ಕಾಲದಲ್ಲಿ ಕುಟುಂಬದಲ್ಲಿ ಎಂಟು ಹತ್ತು ಮಕ್ಕಳು ಇರುತ್ತಿದ್ದರು. ವರ್ಷಕ್ಕೊಂದರಂತೆ ಮಕ್ಕಳು ಹೆತ್ತ ಉದಾಹರಣೆಗಳೂ ಇವೆ. ಜನಸಂಖ್ಯಾ ನಿಯಂತ್ರಣದ ಮಹತ್ವದ ಅರಿವಾದಂತೆ ಎರಡು ಅಥವಾ ಮೂರು ಮಕ್ಕಳಿಗೆ ಸೀಮಿತವಾಗಿರುವ ಕುಟುಂಬಗಳು ಸಾಮಾನ್ಯವಾದವು. ಆದರೆ ಈಗ ಒಂದೇ ಮಗುವಿರುವ ಕುಟುಂಬ ಹೆಚ್ಚೆಚ್ಚು ಕಾಣುತ್ತಿದೆ. ಈಗಿನ ಯುವ ದಂಪತಿಗಳು ತಮಗೆ ಒಂದೇ ಮಗು ಸಾಕು ಎಂಬ ನಿರ್ಣಯ ತೆಗೆದುಕೊಂಡು ತಮ್ಮ ಪೀಳಿಗೆಯನ್ನು ಒಂದೇ ಮಗುವಿಗೆ ನಿಲ್ಲಿಸಿರುವ ಉದಾಹರಣೆಗಳು ಈಗ ಸಾಮಾನ್ಯವಾಗಿದೆ. ಗಂಡ ಹೆಂಡತಿ ಇಬ್ಬರೇ ಇರುವ ಕುಟುಂಬ ವ್ಯವಸ್ಥೆಯಲ್ಲಿ ಇಬ್ಬರೂ ದುಡಿಯಬೇಕಾದ ಅಗತ್ಯ ಇರುವ ಈ ಕಾಲದಲ್ಲಿ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವವರು ಯಾರು? ಎಂಬ ಪ್ರಶ್ನೆಗೂ, ಮಕ್ಕಳು ಬೇಕು ಎಂಬ ಅನಿವಾರ್ಯತೆಗೂ ಇರುವ ಒಂದೇ ಮಧ್ಯಮ ಮಾರ್ಗ "ಒಂದೇ ಮಗು ಇರುವ ಕುಟುಂಬ". ಪಾಶ್ಚಾತ್ಯ ದೇಶಗಳಲ್ಲಿ ಆರಂಭವಾದ ಈ ಕ್ರಮವು ನಮ್ಮ ದೇಶಕ್ಕೂ ಅಡಿಯಿಡುತ್ತಿದೆ.

ಆದರೆ ಪಾಶ್ಚಾತ್ಯ ಸಂಸ್ಕೃತಿಗೂ ನಮ್ಮ ಸಂಸ್ಕೃತಿಗೂ ಇನ್ನೂ ಅಗಾಧ ವ್ಯತ್ಯಾಸಗಳಿವೆ. ಗಂಡ ಹೆಂಡಿರು ಮದುವೆಯಾದಂದಿನಂದ ಜೊತೆಯಾಗಿ ಕೊನೆತನಕ ಅನುಸರಿಸಿಕೊಂಡು ಬದುಕುವ ಕುಟುಂಬ ವ್ಯವಸ್ಥೆ ನಮ್ಮದು. ಜಾತಿ ಪ್ರಧಾನವಾದ ಸಮಾಜ. ಗೆಳೆಯರಿಗಿಂತ ರಕ್ತಸಂಬಂಧಕ್ಕೇ ಹೆಚ್ಚು ಪ್ರಾಮುಖ್ಯತೆ. ಗೆಳೆಯರಿದ್ದರೂ ಅವರು ಜಾತಿಬಾಂಧವರೇ ಆಗಿರುವುದನ್ನು ಗಮನಿಸಬೇಕು. ಯಾವುದೇ ಸಮಾರಂಭಕ್ಕೆ ಸಾವಿರ ಮೈಲು ದೂರವಿದ್ದರೂ ಸಂಬಂಧಿಕರನ್ನು ಆಮಂತ್ರಿಸುವುದೂ, ಹಾಗೆಯೇ ಅವರು ಹಾಜರಾಗುವದೂ ನಮ್ಮ ದೇಶದ ವೈಶಿಷ್ಟ್ಯವಲ್ಲವೇ?

"ಮನೆಗೊಂದೇ ಮಗು"ವಿನ ಜೀವನ ಶೈಲಿಯು ಜನಪ್ರಿಯವಾಗುತ್ತಿರುವ ಹಿನ್ನೆಲೆಯಲ್ಲಿ(ಅದರಲ್ಲೂ ಬ್ರಾಹ್ಮಣ ವರ್ಗದವರಲ್ಲಿ ಅದರ ಜನಪ್ರಿಯತೆ ಸ್ವಲ್ಪ ಹೆಚ್ಚೇ ಎನಿಸುವಂತಿದೆ), ಅದು ನಮ್ಮ ದೇಶದ ಸಂಸ್ಕೃತಿಗೆ ಹೊಂದೀತೆ ಎಂಬುದನ್ನು ಗಣನೆಯಲ್ಲಿಟ್ಟುಕೊಂಡು, ನಮ್ಮ ಯುವ ಜನಾಂಗದ ಈ ನಿಲುವಿನ ಸಾಧಕ ಬಾಧಕಗಳ ಬಗ್ಗೆ ಸಣ್ಣ ವಿಶ್ಲೇಷಣೆಯೊಂದು ಇದೋ ಮುಂದಿದೆ.

ಮನೆಗೊಂದೇ ಮಗುವಿದ್ದರೆ ನೋಡಿಕೊಳ್ಳಲು ಸುಲಭ', ಪ್ರತಿಯೊಂದೂ ದುಬಾರಿಯಾಗಿರುವ ದಿನಗಳಲ್ಲಿ ಇನ್ನೊಂದು ಮಗುವಿಗಾಗಿ ಮಾಡುವ ಖರ್ಚು ಉಳಿದು ಅನುಕೂಲಕರ ಜೀವನ ಸಾಗಿಸಲು ಸುಲಭವಾಗುತ್ತದೆ. ಇರುವ ಒಂದೇ ಮಗುವಿಗೆ ಎಲ್ಲಾ ಪ್ರೀತಿಯನ್ನು ಧಾರೆ ಎರೆದು ಚೆನ್ನಾಗಿ ನೋಡಿಕೊಳ್ಳಬಹುದು. ಇವೆಲ್ಲಾ ಮನೆಗೊಂದೇ ಮಗುವಿರುವುದರ ಅನುಕೂಲತೆಗಳು

ಆದರೆ ಮಗುವಿಗೆ ಮನೆಯಲ್ಲಿ ಜೊತೆಗಾರ ಯಾರು? ಸದಾ ಬ್ಯುಸಿಯಾಗಿದ್ದು ಆಫೀಸು ಕೆಲಸವನ್ನೂ ಮನೆಗೆ ಹೊತ್ತು ತರುವ ಅಪ್ಪ ಅಮ್ಮನ ಮಧ್ಯೆ ಮಗುವಿನ ಜೊತೆಗೆ ಆಟವಾಡುವವನು ಯಾರು? ಮಗುವಿಗೆ ಕೇವಲ ಆಟಕ್ಕೆ ಮಾತ್ರ ಜೊತೆಗಾರ ಬೇಕು ಅಂತಲ್ಲ, ಮಗು ಇನ್ನೊಬ್ಬನ ಜೊತೆಗೆ ಸಮಾನವಾಗಿ ಹಂಚಿಕೊಂಡು ಬೆಳೆಯುವುದನ್ನು ಕಲಿಯುವುದೂ ಮುಖ್ಯ. ಇಲ್ಲವಾದರೆ ಮಗು ಸ್ವಾರ್ಥಿಯಾಗುವ, ಹಠಮಾರಿಯಾಗುವ, ಅಂತರ್ಮುಖಿಯಾಗುವ ಅಪಾಯವಿದೆ. ಇನ್ನೊಂದು ಮಗುವನ್ನು ನೋಡಿ, ತನ್ನನ್ನು ಅದಕ್ಕೆ ಹೋಲಿಸಿಕೊಂಡು, ಮಗು ಆತ್ಮವಿಶ್ವಾಸ ಬೆಳೆಸಿಕೊಳ್ಳುತ್ತದೆ. ಮನೆಯಲ್ಲಿ ಎರಡು ಮಕ್ಕಳಿದ್ದಾಗ ಅವನನ್ನು ನೋಡಿ ಇವನು, ಇವನನ್ನು ನೋಡಿ ಅವನು, ಹೀಗೆ ಇಬ್ಬರೂ ಮಕ್ಕಳು ಉತ್ತಮ ಆಚಾರ ವಿಚಾರ, ಅಭ್ಯಾಸ ಬೆಳೆಸಿಕೊಳ್ಳುತ್ತವೆ. ಕಾರ್ಟೂನ್ ಚಿತ್ರಗಳ ಪಾತ್ರವನ್ನು ತನ್ನ ಗೆಳೆಯನೆಂದು ಕಲ್ಪನೆ ಮಾಡಿಕೊಳ್ಳುವ, ಕಾರ್ಟೂನ್ ಪಾತ್ರಗಳನ್ನು ಅನುಕರಿಸುವ ಮಾನಸಿಕ ವಿಕಲ್ಪಗಳು ಒಂಟಿಮಕ್ಕಳಲ್ಲಿ ಬೆಳೆಯುವ ಸಾಧ್ಯತೆ ಇದೆ. ಮನೆಯ ಹೊರಗಿನ ಗೆಳೆಯರ ಗೆಳೆತನವು ನಮ್ಮ ಸಂಸ್ಕೃತಿಗೆ ಒಗ್ಗದ ಕೆಲವು ಅಭ್ಯಾಸಗಳನ್ನು ನಮ್ಮ ಮಕ್ಕಳಿಗೆ ಕಲಿಸುವ ಅಪಾಯವಿದೆ.

ಇವೆಲ್ಲಾ ಮಗುವಿಗೆ ಮೀಸಲಾದ ಬಾಧಕಗಳಾದರೆ ಈ ವ್ಯವಸ್ಥೆ ಮುಂದುವರಿದಂತೆಲ್ಲಾ ಅಣ್ಣ ತಮ್ಮ ಅಕ್ಕ ತಂಗಿ ದೊಡ್ಡಪ್ಪ ಚಿಕ್ಕಪ್ಪ ಅತ್ತೆ ಮಾವ ಇತ್ಯಾದಿ ಸಂಬಂಧಗಳೇ ನಾಪತ್ತೆಯಾಗುತ್ತವೆ. ಸಂಬಂಧಿಗಳೇ ಇಲ್ಲದ, ಗೆಳೆಯರು ಸಲ್ಲದ ಮನುಷ್ಯನಿಗೆ ಆಪತ್ಕಾಲದಲ್ಲಿ ಸಹಾಯ ಮಾಡುವವರು ಯಾರು? ಎಂಬ ಪ್ರಶ್ನೆಗೆ, "ಹುಟ್ಟಿಸಿದವನು ಹುಲ್ಲು ಮೇಯಿಸುವುದಿಲ್ಲ" ಎಂಬ ದಾಸರ ಪದವೇ ಈ ವ್ಯವಸ್ಥೆಯಲ್ಲಿ ಉತ್ತರವಾಗಿದೆ.

ನಮ್ಮ ದೇಶದಲ್ಲಿ ಮನೆಗೊಂದೇ ಮಗುವಿನ ಪದ್ಧತಿಯನ್ನು ಅನುಸರಿಸುವವರು ಹೆಚ್ಚಿನವರು ಅನುಕೂಲವಂತರು ಹಾಗೂ ವಿದ್ಯಾವಂತರು!!. ಕಡಿಮೆ ಮಕ್ಕಳನ್ನು ಹೆತ್ತು ಅನುಕೂಲದ ಜೀವನ ಸಾಗಿಸಿರಿ ಎಂಬ ಉಪದೇಶ ಲಗಾವಾಗಬೇಕಾದವರು ಯಾವ ಚಿಂತೆಯೂ ಇಲ್ಲದೆ ಮಕ್ಕಳನ್ನು ಹೆರುತ್ತಲೇ ಇದ್ದಾರೆ. ತಮ್ಮ ಮಕ್ಕಳಿಗೆ ಕಲಿಸಿ ಬೆಳೆಸಿ ದೇಶಕ್ಕೊಂದು ಉತ್ತಮ ಪ್ರಜೆಯನ್ನು ಕಾಣಿಕೆಯಾಗ ನೀಡಬಲ್ಲ ಸಾಮರ್ಥ್ಯ ಉಳ್ಳವರು ಕಡಿಮೆ ಮಕ್ಕಳನ್ನು ಹೆತ್ತು, ಇಲ್ಲದವರು ಹೆಚ್ಚೆಚ್ಚು ಮಕ್ಕಳನ್ನು ಹೆರುವುದಾದರೆ ಈ ದೇಶವು ಇಂತಹಾ ಮಕ್ಕಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಭಾರದಿಂದ ಕುಸಿದು ಹೋಗುವುದು ಖಂಡಿತಾ.

ನಮ್ಮ ದೇಶದ ಪ್ರಜೆಗಳನ್ನು ಒಂದು ಕಾಲದಲ್ಲಿ ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರರು ಎಂದು ವರ್ಗೀಕರಿಸುತ್ತಿದ್ದರು. ಸ್ವಾತಂತ್ರ ಕಾಲದಲ್ಲಿ ಮುಂದುವರಿದವರು ಹಾಗೂ ಹಿಂದುಳಿದವರು ಎಂದು ವರ್ಗೀಕರಿಸಿ ಮೀಸಲಾತಿಯಂತಹಾ ಸೌಲಭ್ಯಗಳನ್ನು ಹಿಂದುಳಿದವರು ಮುಂದೆ ಬರಲು ಸಹಾಯವಾಗಲಿ ಎಂಬ ಉದ್ದೇಶದಿಂದ ನೀಡಲಾಯಿತು. ಈಗ ಇದೇ ದೇಶದ ಪ್ರಜೆಗಳನ್ನು ಸರಕಾರದ ಸವಲತ್ತು ಪಡೆಯುವವರು ಹಾಗೂ ಪಡೆಯದವರು ಎಂದು ವರ್ಗೀಕರಿಸಬೇಕಾದ ಕಾಲ ಬಂದಿದೆ. ರಾಜಕಾರಿಣಿಗಳು ದೇಶದ ಜನರ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಜಾರಿಗೆ ತರುವ ಬದಲು ತಮ್ಮ ಜನಪ್ರಿಯತೆಯನ್ನು ಹೆಚ್ಚಿಸುವ, ಜನರನ್ನು ಮರುಳುಗೊಳಿಸುವ ಸವಲತ್ತುಗಳನ್ನು ಪುಗಸಟ್ಟೆಯಾಗಿ ನೀಡುವ ಕಾರ್ಯಕ್ರಮಗಳಿಗೇ ಆದ್ಯತೆ ನೀಡುತ್ತಿದ್ದಾರೆ. ಯಾವ ಜಾತಿಯ ಜನಸಂಖ್ಯೆ ಜಾಸ್ತಿ ಇದೆಯೋ ಆ ಜಾತಿಯ ಜನರಿಗೆ ಈ ಸವಲತ್ತುಗಳು ಸುಲಭದಲ್ಲಿ ಸಿಗುತ್ತಿವೆ. ಹಾಗೆಯೇ ಯಾವುದೇ ರಾಜಕೀಯ ಹುದ್ದೆಗೂ ಅವನ ಜಾತಿಯ ಜನಸಂಖ್ಯೆಯೇ ಮುಖ್ಯವಾಗಿದ್ದು ಅವನ ಕ್ಷಮತೆಗೆ ಪ್ರಾಮುಖ್ಯತೆ ಇಲ್ಲವಾಗಿರುವುದನ್ನು ಗಮನಿಸಿರಿ. ಹಾಗಿರುವಾಗ ಈ ದೇಶದ ಜನಸಂಖ್ಯೆಯಲ್ಲಿ ಕೇವಲ ಶೇಕಡಾ 5 ರಷ್ಟು ಮಾತ್ರಾ ಇರುವ ಬ್ರಾಹ್ಮಣರ ಅಭಿಪ್ರಾಯಗಳನ್ನು ಹಾಗೂ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುವಾಗ ಅವರನ್ನು ನಿರ್ಲಕ್ಷಿಸಲಾಗುತ್ತಿರುವುದು ಅತಿಶಯೋಕ್ತಿಯಲ್ಲ. ಆದುದರಿಂದ ಬ್ರಾಹ್ಮಣರೇ ಒಂದು ಕ್ಷಣ ವಿಚಾರ ಮಾಡಿರಿ! ನಮ್ಮ ಮಕ್ಕಳು ದೊಡ್ಡವರಾದಾಗ ಈ ದೇಶದಲ್ಲಿ ರಾಜಕೀಯವಾಗಿ ನಿರ್ಲಕ್ಷಿತರಾಗಿ ಕೇವಲ ದುಡಿದು ತೆರಿಗೆ ಕಟ್ಟುವ ಯಂತ್ರಗಳಾಗಿ ಜೀವಿಸಬೇಕೆ? ಅಥವಾ ನಾವೀಗ ಒಂದೇ ಮಗು ಸಾಕು ಎಂಬ ವಿಚಾರವನ್ನು ಬಿಟ್ಟು ಕನಿಷ್ಟ ಎರಡು ಬುದ್ಧಿವಂತ, ವಿದ್ಯಾವಂತ ಮೇಧಾವಿ ಮಕ್ಕಳನ್ನು ಈ ದೇಶಕ್ಕೆ ಕಾಣಿಕೆಯಾಗಿ ನೀಡಿ ಆ ಮೂಲಕ ಈ ದೇಶದಲ್ಲಿ ವಿಚಾರವಂತರ ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ ಹೆಚ್ಚುವಂತೆ ಮಾಡಿ ನಮ್ಮ ಸ್ಥಾನ ಮಾನ ಉಳಿಸಿ ಕೊಳ್ಳಬೇಕೆ? ನಿರ್ಧರಿಸಿ.


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


## ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-10

## ಶ್ರೀ ಸುಬ್ರಹ್ಮಣ್ಯ ದೇವಸ್ಥಾನ , ಕಾಂತಮಂಗಲ, ಅಜ್ಜಾವರ , ಸುಳ್ಯ



ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದಲ್ಲಿ ಹರಿಯುತಿರುವ ಪಯಸ್ವಿನಿ ನದಿಯ ಪಶ್ಚಿಮ ದಂಡೆಯಲ್ಲಿ ಶೋಭಿಸುತ್ತಿರುವ ದೇವಸ್ಥಾನವಿದು. ಐತಿಹಾಸಿಕವಾಗಿ ಎಷ್ಟು ಪುರಾತನವೆಂದು ತಿಳಿದಿಲ್ಲವಾದರೂ ಪ್ರಶ್ನೆ ಮುಖೇನ ಇದು 250 ವರ್ಷಗಳಿಗೂ ಹಿಂದಿನದೆಂದು ಊಹಿಸಲಾಗಿದೆ

2012ನೇ ಇಸವಿಯಲ್ಲಿ ಮುಳಿಹುಲ್ಲಿನ ಛಾವಣಿಯಿದ್ದ ಈ ದೇವಳವನ್ನು ಜೀರ್ಣೋದ್ಧಾರಗೊಳಿಸಿ ಶ್ರೀ ದೇವರ ಗರ್ಭಗುಡಿ ಹಾಗೂ ನಮಸ್ಕಾರ ಮಂಟಪಗಳನ್ನು ಶಿಲಾಮಯವಾಗಿ ನಿರ್ಮಿಸಲಾಯಿತು. ಸುತ್ತುಪೌಳಿಯನ್ನೂ ಶಿಲೆಯಲ್ಲೇ ನಿರ್ಮಿಸಲಾಗಿದೆ. ದೇವಳದ ಹೊರಗೆ ಪೂರ್ವ ಭಾಗದಲ್ಲಿ ಇದ್ದ ಪುರಾತನ ನಾಗಬನವನ್ನೂ ಜೀರ್ಣೋದ್ಧಾರಗೊಳಿಸಲಾಗಿದೆ. ಅಲ್ಲಿ ಗುಳಿಗ ಹಾಗೂ ರಕ್ತೇಶ್ವರೀ ದೈವಗಳಿಗೆ ಕಟ್ಟೆಯನ್ನೂ ನಿರ್ಮಿಸಲಾಗಿದೆ. ದೇವಳದ ಆವರಣದೊಳಗೆ ನೈರುತ್ಯಮೂಲೆಯಲ್ಲಿ ವನಶಾಸ್ತಾರನಿಗೆ ಗುಡಿಯಿದೆ. ಈಶಾನ್ಯಮೂಲೆಯಲ್ಲಿ ಅಶ್ವತ್ಥ ಕಟ್ಟೆಯಿದೆ. ಭಗ್ನವಾಗಿದ್ದ ದೇವರ ಹಳೆಯ ಮೂರ್ತಿಯನ್ನು ಜಲಾಧಿವಾಸಗೊಳಿಸಿ ಹೊಸ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ

ಸುಳ್ಯಪೇಟೆಯಿಂದ ಅಜ್ಜಾವರಕ್ಕೆ ಹೋಗುವ ರಸ್ತೆಯಲ್ಲಿ ಕಾಂತಮಂಗಲ ಸಿಗುತ್ತದೆ. ಇಲ್ಲಿ ಪಯಸ್ವಿನ ನದಿಯ ದಂಡೆಯಲ್ಲಿ ಈ ದೇವಸ್ಥಾನವಿದೆ. ಈ ದೇವಾಲಯವು 19ನೇ ಶತಮಾನದಲ್ಲಿ ಕೊಡಗಿನ ಅರಸನಾಗಿದ್ದ ಚಿಕವೀರರಾಜೇಂದ್ರನ ಆಸ್ಥಾನದಲ್ಲಿ ದಿವಾನರಾಗಿದ್ದ ಶ್ರೀ ಲಕ್ಷ್ಮೀನಾರಾಯಣಯ್ಯನವರ ಕುಟುಂಬಕ್ಕೆ ಸೇರಿದ್ದಾಗಿದೆ. ಅವರ ವಂಶಸ್ಥರು ಈಗ ನಾಲ್ಕು ಕವಲುಗಳಾಗಿ ದೇವಳದ ಸ್ಥಳ ಬಯಂಬು ಕವಲಿನ ಅಧೀನದಲ್ಲಿದೆ. ಬಯಂಬು ಸಹೋದರರಾದ ಶ್ರೀ ಎ. ಶಿವರಾವ್ ಹಾಗೂ ಶ್ರೀ ಎ. ಭಾಸ್ಕರ ರಾವ್ ಇವರು ಸ್ಥಾಪಿಸಿದ ಶ್ರೀ ಶಾರದಾರಾಮ ಸೇವಾ ಪ್ರತಿಷ್ಠಾನದ ಮೂಲಕ ಶೃಂಗೇರಿ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ ಜೀರ್ಣೋದ್ಧಾರದ ಕಾರ್ಯ ನೆರವೇರಿದೆ. ಶ್ರೀ ಶ್ರೀಗಳವರು ದೇವಳಕ್ಕೆ ಸ್ವತಃ ಭೇಟಿಯಿತ್ತು ಅನುಗ್ರಹಿಸಿದ್ದರು.

ದೇವಳದಲ್ಲಿ ಕಾರ್ತಿಕ ಪೂಜೆ, ಹೂವಿನಪೂಜೆ, ರುದ್ರಪಾರಾಯಣ, ರುದ್ರಾಭಿಷೇಕ, ಅಶ್ವತ್ಥ ಪೂಜೆ, ನಾಗನಿಗೆ ಹಾಲು ಅಭಿಷೇಕ ನಿತ್ಯವು ನಡೆಯುತ್ತಿರುತ್ತದೆ. ಪ್ರತೀ ತಿಂಗಳ ಅಶ್ಲೇಷಾ ನಕ್ಷತ್ರದಂದು ಅಶ್ಲೇಷಾಬಲಿ ಸೇವೆ ನಡೆಸಲಾಗುತ್ತದೆ. ಭಕ್ತರಿಗೆ ಸಾಮೂಹಿಕ ರಂಗಪೂಜೆಯಲ್ಲೂ ಪಾಲ್ಗೊಳ್ಳುವ ಅವಕಾಶ ಇದೆ. ಪ್ರತೀ ವರ್ಷ ಕುಂಭಮಾಸದ ಐದನೇ ದಿನದಂದು ಪ್ರತಿಷ್ಠಾಮಹೋತ್ಸವ ಜರಗುತ್ತದೆ.

ಬಯಂಬು ಮನೆತನದ ಶ್ರೀ ಅಜ್ಜಾವರ ಶಿವರಾವ್ ಇವರು ದೇವಳದ ಆಡಳಿತ ಮೊಕ್ತೇಸರರಾಗಿ, ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ದೇವಳದ ತಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಸದಾನಂದ ಶಾಸ್ತ್ರಿಗಳು ಪ್ರಧಾನ ಅರ್ಚಕರಾಗಿದ್ದಾರೆ.ಇನ್ನೂ ಹೆಚ್ಚಿನ ಮಾಹಿತಿಗಾಗಿ 9880570747ನಲ್ಲಿ ಸಂಪರ್ಕಿಸಬಹುದು.


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ
ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

## ಅರ್ಧ ಕಥಾನಕ (ಮಗ ತೇಜಸ್ವಿ ನೆನಪಿನಲ್ಲಿ ಹುಟ್ಟಿದ ಎಂ.ವ್ಯಾಸ)


– ವೈ. ಮೋಹನ ರಾವ್

ವ್ಯಾಸರು ತೀರಿಕೊಂಡಾಗ ಅವರ ವಯಸ್ಸು 68. ಅವರ ಮಗ ಡಾ। ತೇಜಸ್ವಿ ಅವರು ಹೇಳಿದ ಈ ಕಥಾನಕವನ್ನು ನಿರೂಪಿಸಿದವರು ಅನುಪಮಾ ಪ್ರಸಾದ್.

‘‘ಈ ಕಥನಕ್ಕೆ ಅರ್ಧಕಥಾನಕ ಎಂದು ಕರೆದಿರುವುದಕ್ಕೆ ಕಾರಣವೂ ಇರಬಹುದು. ವ್ಯಾಸರ ಬದುಕನ್ನು, ಕೌಟುಂಬಿಕ ಜೀವನವನ್ನು ಹತ್ತಿರದಿಂದ ತಿಳಿದವರಿಗೆ, ವ್ಯಾಸರ ಅರ್ಧದಲ್ಲಿ ಅವರ ಮಗ ತೇಜಸ್ವಿ ವ್ಯಾಸ್ ಇದ್ದರು, ಇದ್ದಾರೆ ಎಂಬುದು ಗೊತ್ತಿರುವ ಸಂಗತಿಯೇ. ವ್ಯಾಸರಿಗೆ ತೇಜಸ್ವಿ ಕೇವಲ ಮಗನಾಗಿರಲಿಲ್ಲ; ಅವನು ಆಪ್ತ, ಗೆಳೆಯ, ಕಷ್ಟಸುಖಗಳನ್ನು ಹಂಚಿಕೊಳ್ಳಬಲ್ಲ ಆತ್ಮೀಯ. ತಮ್ಮ ಬಾಲ್ಯದ ಅನುಭವಗಳು, ತಾವು ಓದಿದ ಪುಸ್ತಕಗಳು, ನೋಡಿದ ಸಿನೆಮಾಗಳು, ಚರ್ಚೆಗಳು; ಜೊತೆಗೆ ಓದಬೇಕಾದ ಪುಸ್ತಕಗಳು, ಕೇಳಬೇಕಾದ ಹಾಡುಗಳು, ನೋಡಬೇಕಾದ ಸಿನೆಮಾಗಳು, ಓಡಿಸಬೇಕಾದ ಕಾರುಗಳು, ತಿನ್ನಬೇಕಾದ ತಿಂಡಿಗಳು ಹೀಗೆ ನೂರಾರು ಸಂಗತಿಗಳನ್ನು, ಸಣ್ಣಪುಟ್ಟ ಅನುಭವಗಳನ್ನು ವ್ಯಾಸರು ತನ್ನ ಈ ಮಗನೆಂಬ ಗೆಳೆಯನೊಂದಿಗೆ ನಿತ್ಯ ಹಂಚಿಕೊಂಡಿದ್ದರು. ಸದಾ ಅಪ್ಪನ ಬೆನ್ನಿಗೇ ಇರುತ್ತಿದ್ದ ತೇಜಸ್ವಿ, ಬಹುಪಾಲು ಇದನ್ನೆಲ್ಲ ಸ್ವತಃ ತಮ್ಮ ಕಣ್ಣಿಂದ ನೋಡುವ ಅವಕಾಶವನ್ನೂ ಪಡೆದುಕೊಂಡಿದ್ದರು; ಉಳಿದದ್ದು ವ್ಯಾಸರು ಹೇಳಿದ ಕಥನಗಳ ಮೂಲಕ. ವ್ಯಾಸರಿಲ್ಲದ ಈ ಹೊತ್ತಿನಲ್ಲಿ ಅದು ತೇಜಸ್ವಿಯಲ್ಲಿ ಉಳಿದಿರುವ ದೊಡ್ಡ ಭಂಡಾರವೂ ಹೌದು. ಈ ಭಂಡಾರದಲ್ಲಿ ಇರುವ ಸರಕಿನಲ್ಲಿ ತೇಜಸ್ವಿಯವರದು ಎಷ್ಟು, ವ್ಯಾಸರದು ಎಷ್ಟು ಎಂದು ಪ್ರತ್ಯೇಕಿಸಿ ನೋಡಲು ಆಗುವುದೇ ಇಲ್ಲ. ಈ ಕಾರಣದಿಂದಾಗಿಯೇ ಇದು ಅರ್ಧಕಥಾನಕ–ಅರ್ಧ ತೇಜಸ್ವಿಯವರದು; ಅರ್ಧ ವ್ಯಾಸರದು’’ ಎಂದು ಮುನ್ನುಡಿಯಲ್ಲಿ ಜಿ.ಪಿ. ಬಸವರಾಜು ಹೇಳುತ್ತಾರೆ.

‘‘ತೇಜಸ್ವಿ ವ್ಯಾಸ್ ಒಬ್ಬ ಉತ್ತಮ ಹಾಸ್ಯ ಪ್ರಜ್ಞೆಯ ಒಳ್ಳೆಯ ಮಾತುಗಾರನೆಂಬುದು ಕೇಳಿ ಗೊತ್ತಿತ್ತು. ಈ ಕೆಲಸ ಮಾಡಮಾಡುತ್ತ ಅವರ ಓದಿನ ಆಳ; ವಸ್ತುನಿಷ್ಠ ವಿಮರ್ಶೆಯ ಪ್ರಬುದ್ಧತೆ; ವ್ಯಕ್ತಿಯ ಮೇಲಿನ ಸಾಂದರ್ಭಿಕ ಅಸಮಾಧಾನವನ್ನು ಸಂದರ್ಭಕ್ಕೆ ಮಾತ್ರವೇ ಉಳಿಸಿಕೊಂಡೂ, ಆತನ ಅಥವಾ ಅವಳ ಬರಹಗಳನ್ನು ಮೆಚ್ಚುವ ಪರಿಗಳನ್ನು ಗಮನಿಸುತ್ತ ಅವರ ಈ ಗುಣಗಳಿಗೆ ಕಾರಣವಾಗಿರಬಹುದಾದ ವ್ಯಾಸರ ನಿಲುವುಗಳಿಗೆ ವಿಸ್ಮಯಗೊಂಡದ್ದಿದೆ. ತಂದೆ–ಮಗನ ಇಂತಹ ಜೀವದ ಗೆಳೆತನಕ್ಕೆ; ಸಾಂಗತ್ಯಕ್ಕೆ ಅಕ್ಷರ ರೂಪ ಕೊಡುತ್ತಿದ್ದೇನೆಂದು ಹೆಮ್ಮೆ ಪಟ್ಟದ್ದಿದೆ. ಧನ್ಯತೆಯಲ್ಲೇ ಜೋಡಿಸಿದ್ದಿದೆ’’ ಎಂದು ಅರ್ಧ ಕಥಾನಕವನ್ನು ನಿರೂಪಿಸಿದ ಅನುಪಮಾ ಪ್ರಸಾದ್ ತಿಳಿಸುತ್ತಾರೆ.

‘‘ಕಲೆ–ಸಾಹಿತ್ಯ, ಸಂಗೀತಗಳಲ್ಲಿ ಪ್ರೀತಿ ಇರುವ ಅನಂತಪುರ ಮನೆಯ ಈಶ್ವರಯ್ಯನವರಿಗೆ ಬೇರೆ ಬೇರೆ ನಮೂನೆಯ ವಾದ್ಯೋಪಕರಣಗಳ ಬೇಸಿಕ್ ತಿಳುವಳಿಕೆಯಿತ್ತು. ಅವರ ತಮ್ಮ ಶ್ರೀಕೃಷ್ಣಯ್ಯರ ಮಗ ಸಂತೋಷ್ ಅನಂತಪುರ ಟ್ರಿಪಲ್ ಕಾಂಗೋ ಅನ್ನುವ ತಾಳವಾದ್ಯ ನುಡಿಸುತ್ತಿದ್ದರೆ ಎಷ್ಟು ಚಂದ ನುಡಿಸ್ತಾನೆ ಮಗಾ ಸಂತೋಷ ಅನ್ನುತ್ತ ಅಣ್ಣ ತಲೆ ಆಡಿಸುತ್ತ ಕೇಳುತ್ತಿದ್ದರು. ಸತ್ಯನಾಥ ಮಾವ, ಅಂದರೆ ಈಶ್ವರಯ್ಯನವರ ಸಣ್ಣ ತಮ್ಮ, ಒಳ್ಳೆಯ ಹಾಡುಗಾರ. ಅಣ್ಣನಿಗೆ ಅವನ ಬಗ್ಗೆ ಬಹಳ ಅಕ್ಕರೆ. ಕಲೆ–ಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಕಾರಗಳಲ್ಲೂ ಈಶ್ವರಯ್ಯನವರಿಗೆ ಆಸಕ್ತಿ. ಅದರಿಂದಾಗಿಯೇ ಅವರ ಕಾಲದಲ್ಲಿ ಉದಯವಾಣಿಯಲ್ಲಿ ಕಲಾವಿಭಾಗ ಹುಟ್ಟಿಕೊಂಡಿದ್ದಿರಬೇಕು. ಈಶ್ವರಯ್ಯ ಮಾವನೆಂದರೆ ಅಣ್ಣನಿಗೆ ಬಹಳ ಪ್ರೀತಿ–ಅಭಿಮಾನ. ಅನಂತಪುರ




ಮನೆಯವರು ನನ್ನ ಅಮ್ಮನ ಸೋದರ ಸಂಬಂಧಿಯೂ ಹೌದು. ನನ್ನ ಅಣ್ಣನ ಕಡೆಯಿಂದ ಸಂಬಂಧಿಕರೂ ಹೌದು’’ ಎಂದು ಕೃತಿಯ ‘ಸಂಚುಹೂಡಿದ ಮಳೆಗಾಲ’ದಲ್ಲಿ ತಿಳಿಸಲ್ಪಟ್ಟಿದೆ.

‘‘ಅಣ್ಣನಿಗೆ ಯಕ್ಷಗಾನ ಅಥವಾ ಯಕ್ಷಗಾನದ ಪದಗಳಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಆದರೆ ಶೇಣಿಯವರೆಂದರೆ ಬಹಳ ಪ್ರೀತಿ. ತರ್ಕದಿಂದ ಕೂಡಿದ ಅವರ ವಾಕ್ಚಾತುರ್ಯವನ್ನು ಅಪ್ಪ ಮೆಚ್ಚಿಕೊಳ್ಳುತ್ತಿದ್ದರು. ನಾವೆಲ್ಲ ಯಕ್ಷಗಾನ ಪದಗಳನ್ನು ಕೇಳುತ್ತಿದ್ದುದರಿಂದ ಭಾಗವತರ ಸ್ವರಗಳು ಕಿವಿಗೆ ಬಿದ್ದು ಬಿದ್ದು ಅದು ಇಂತವರದೇ ಎಂದು ಅಪ್ಪ ಗುರುತಿಸಿಬಿಡುತ್ತಿದ್ದರು’’ ಎಂದು ‘ಜ್ಞಾನ ಬೋಧಿನಿ’ಯಲ್ಲಿ ತಿಳಿಸಲ್ಪಟ್ಟಿದೆ.

‘‘ಅಣ್ಣನ ಸಾವಿನ ಕೆಲ ದಿನಗಳ ನಂತರ ಅವರ ಪುಸ್ತಕಗಳ ನಡುವೆ ನನಗೊಂದು ಪತ್ರ ಸಿಕ್ಕಿತು. ಅದು ಜೀರ್ಣಾವಸ್ಥೆಯಲ್ಲಿರುವ ಒಂದು ಎಫ್.ಐ.ಆರ್. ಪ್ರತಿ. ಅದರಲ್ಲಿ ಅಪ್ಪನ ಮಾತುಗಳು ಹೀಗೆ ದಾಖಲಾಗಿವೆ. ‘‘ಇವರು ನನ್ನ ತಂದೆಯವರು. ಇವರನ್ನು ಯಾರು ಕೊಂದರು ಅಂತ ನನಗೆ ಗೊತ್ತಿಲ್ಲ. ನಾನು ಬರುವಾಗ ಇವರು ಸತ್ತಿದ್ದರು. ಉಸಿರಾಡುತ್ತಿರಲಿಲ್ಲ. ಇವರ ಮೈ ಮತ್ತು ತಲೆ, ಹಣೆ ಭಾಗಗಳಲ್ಲಿ ಕಡಿದ ಗಾಯಗಳಿದ್ದವು. ನೆತ್ತರು ಬರುತ್ತಿರಲಿಲ್ಲ. ಕಣ್ಣುಗಳು ಅರೆ ತೆರೆದಿದ್ದವು. ನನ್ನ ತಂದೆಯವರ ಕೊಡೆ ಮತ್ತು ಚಪ್ಪಲಿಗಳು ಅಲ್ಲಿ ಬಿದ್ದಿದ್ದವು’’. ಇದನ್ನ ಓದಿದ ಮೇಲೆ ಈಗ ನನಗನಿಸುತ್ತದೆ; ‘‘ಕೊಲೆಯಾಗಿ ಬಿದ್ದ ತಂದೆಯೆದುರು ದಿಕ್ಕೆಟ್ಟು ಕುಳಿತ ಹದಿ ಹರೆಯದ ಯುವಕನನ್ನು ಆ ಕ್ಷಣದಲ್ಲಿ ಗಾಢವಾಗಿ ಆವರಿಸಿಕೊಂಡ ಅಸಹನೀಯ ಯಾತನೆಯೇ ಜೀವನದ ಕೊನೆಯವರೆಗೂ ಸ್ಥಾಯೀ ಭಾವವಾಗಿ ಅವರಲ್ಲಿ ಉಳಿಯಿತು. ಬದುಕಿನ ಆ ಯಾತನೆಯೇ ಅವರಿಗೆ ಮಾನವ ಬದುಕಿನ ಸಂಕಟಗಳನ್ನು, ಕ್ಷುದ್ರತೆಗಳನ್ನು ತೀವ್ರವಾಗಿ ಅಕ್ಷರಗಳಲ್ಲಿ ಹಿಡಿದಿಡಲು ಸಾಧ್ಯವಾಗಿಸಿದ್ದು’’ ಅನಿಸಿ ಕಣ್ಣು ಒದ್ದೆಯಾಗುತ್ತದೆ. ಜೊತೆಗೆ ಅದಕ್ಕಾಗಿಯೇ ಅಣ್ಣನನ್ನು (ಎಂ.ವ್ಯಾಸ) ಕೆಲವರು ‘ವಿಕ್ಷಿಪ್ತ ಬರಹಗಾರ’ ಎಂದು ತಪ್ಪಾಗಿ ಗುರುತಿಸುತ್ತಾರೆ ಅನಿಸುತ್ತದೆ’’ ಎಂದು ‘ಬದುಕನ್ನು ತಿರ್ಗಾಸಿನಲ್ಲಿ ನಿಲ್ಲಿಸಿದ ಸಾವು’ ಇಲ್ಲಿ ಹೇಳಲ್ಪಟ್ಟಿದೆ.

ಎಂ.ವ್ಯಾಸರ ಪತ್ನಿ ಶ್ರೀಮತಿ ಶಶಿಕಲಾ. ಡಾ। ತೇಜಸ್ವಿ ವ್ಯಾಸ್, ಶ್ರೀಮತಿ ಕೃಪಾ ಮತ್ತು ಶ್ರೀಮತಿ ಪ್ರತಿಮಾ ವ್ಯಾಸರ ಮಕ್ಕಳು. ಡಾ। ತೇಜಸ್ವಿ ಅವರ ಪತ್ನಿ ಡಾ। ಅನಿತಾ. ವ್ಯಾಸರ ಸಹೋದರ ಎಂ.ಶುಭಕರ ಶ್ಯಾನುಭಾಗ್. ಇವರ ಪತ್ನಿ ಶ್ರೀಮತಿ ರಾಜೇಶ್ವರಿ. ರಾಜೇಶ್ವರಿಯವರ ತಂಗಿ ಉಷಾ ನನ್ನ ಪತ್ನಿ.

ಕಂಬನಿ, ದಡ, ಕೃತ, ಸ್ನಾನ, ತಪ್ತ, ಅಸ್ತ್ರ, ಕೆಂಡ, ಕಾಂತ ಇವೆಲ್ಲ ವ್ಯಾಸರ ಕಥಾ ಸಂಕಲನಗಳು. ಮೌನಗರ್ಭ (ಮನುಷ್ಯ ಕೇಂದ್ರಿತ ಬರಹ), ಸೃಷ್ಟಿ (ಕವನಗಳು), ಸುಳಿ (ಕವನ ಸಂಕಲನ), ಜನಪಥ (ಅಂಕಣ ಬರಹಗಳು) ಇವರ ಇತರ ಕೃತಿಗಳು. ಪತಂಗ, ಅಜಂತ ವ್ಯಾಸರ ಪತ್ರಿಕೆಗಳು. ಅರ್ಧದಲ್ಲೇ ನಿಂತ ಸಿನಿಮಾ ‘ಪೂಜೆ’ ಕಥೆ, ಶಿವಗಂಗಾ–ಶಿವಬ್ರಾಹ್ಮಣ ಸಂಘ (ರಿ.) ಕಾಸರಗೋಡು ಇದರ ಸಂಪಾದಕರಾಗಿದ್ದರು.

ಕನ್ನಡ ಕಥಾಜಗತ್ತಿಗೆ ಮುನ್ನೂರಕ್ಕೂ ಹೆಚ್ಚು ವಿಶಿಷ್ಟ ಕತೆಗಳನ್ನು ಸೃಷ್ಟಿಸಿದ ಎಂ.ವ್ಯಾಸ ವಿಭಿನ್ನ ಕಥಾಗಾರರಾಗಿಯೇ ಜನಪ್ರಿಯರು.

ಕೃತಿ : **‘ಅರ್ಧಕಥಾನಕ’**, ನಿರೂಪಣೆ : **ಅನುಪಮಾ ಪ್ರಸಾದ್**, ಹೇಳಲ್ಪಟ್ಟದ್ದು : **ಡಾ। ತೇಜಸ್ವಿ ಎಂ.ವ್ಯಾಸ**, ಪ್ರಕಾಶಕನ : **ಲೋಹಿಯಾ ಪ್ರಕಾಶನ ಬಳ್ಳಾರಿ** ಬೆಲೆ : **ರೂ.75/-**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

–ಸಂಪಾದಕ ಮಂಡಳಿ

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ–576101

### ಪ್ರಕಟಣೆ

**ಆತ್ಮೀಯ ಉಡುಪಿ ತಾಲೂಕಿನ ಸಮಾಜ ಬಾಂಧವರೇ.**

**ಉಡುಪಿ ತಾಲೂಕಿನ ನಮ್ಮ ಸಮಾಜಬಾಂಧವರ ವಿಳಾಸವನ್ನು ಪರಿಷ್ಕರಿಸಿ ಅನೇಕ ವರ್ಷಗಳಾಗಿವೆ. ಸಮಾಜಬಾಂಧವರ ಸಮಗ್ರಮಾಹಿತಿಯುಳ್ಳ ನೂತನ ಆವೃತ್ತಿಯನ್ನು ಹೊರತರುವ ಅಗತ್ಯವನ್ನು ಸಂಘವು ಮನಗಂಡ ಹಿನ್ನೆಲೆಯಲ್ಲಿ ನಮ್ಮ ಸಂಘದ ಸುವರ್ಣಮಹೋತ್ಸವದ ಆಚರಣೆಯ ಅಂಗವಾಗಿ ಉಡುಪಿ ತಾಲೂಕಿನ ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ವಿಳಾಸ ಸಹಿತ ಪುಸ್ತಕವನ್ನು ಪ್ರಕಟಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಈ ಕೆಳಗಿನ ಫಾರಂನ್ನು ಬರ್ತಿಮಾಡಿ ಅಧ್ಯಕ್ಷರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ 576101 ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ**

Name of head of family *:

Occupation and office address:

Qualification: Mobile no.*:

Email: Blood group

Name of spouse *

Occupation and office address:

Qualification: Mobile no.*:

Email: Blood group

Residential address *:

Pin No:

Land phone no:

Are you a member Of our Sangha * : Yes/No

Are you getting SriSharada Paper * : Yes/No

DETAILS OF CHILDREN

| Sl. no. | Name | Date of birth/age | married (yes/no) | Blood group |
|---|---|---|---|---|
| 1. | | | | |
| 2. | | | | |
| 3. | | | | |

NAME & ADDRESS OF CHILDREN STAYING SEPARATE*

1)

Mobile Email

2)

Mobile Email

3)

Mobile Email

*Marked with * are very much required for our address book. Please try to furnish these details without fail*

I give my consent to Sri Stanika Dravida brahmana Sangha to publish this information in address book

*Signature*

# ಬೆಳುವಾಯಿಯಲ್ಲಿ ಯಕ್ಷಗಾನ ನಾಟ್ಯ ತರಬೇತಿ

ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿ (ರಿ) ಬೆಳುವಾಯಿ ಇದರ ಆಶ್ರಯದಲ್ಲಿ ಬೆಳುವಾಯಿ ದುರ್ಗಾಬೆಟ್ಟು "ಅಂಜಾನಶ್ರೀ"ಯ ಯಕ್ಷಕುಟೀರದಲ್ಲಿ ನಾಟ್ಯ ತರಬೇತಿಯನ್ನು ತೆಂಕುತಿಟ್ಟು ಯಕ್ಷಗಾನದ ಹಿರಿಯ ಪ್ರಸಿದ್ಧ ಹಾಸ್ಯ ಕಲಾವಿದ ಬಂಟ್ವಾಳ ಜಯರಾಮ ಆಚಾರ್ಯರಿಂದ ಉದ್ಘಾಟಿಸಲ್ಪಟ್ಟು, ಹೊಸನಗರ ಮೇಳದ ಭಾಗವತ ಶ್ರೀ ರವಿಚಂದ್ರ ಕನ್ನಡಿಕಟ್ಟೆಯವರಿಂದ ಗಣಪತಿ ಸ್ತುತಿಯೊಂದಿಗೆ ನೆರವೇರಿತು, ಆಸಕ್ತ 6ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಬೇಸಿಗೆ ರಜಾ ಶಿಬಿರದಲ್ಲಿ ನಾಟ್ಯ ತರಬೇತಿ ನೀಡಿ ರಂಗ ಪ್ರವೇಶಕ್ಕೆ ಅಣಿಗೊಳಿಸುವ ಆಶಯವನ್ನು 'ಶ್ರೀಯಕ್ಷದೇವ'ದ ಸ್ಥಾಪಕಾಧ್ಯಕ್ಷ ನಾಟ್ಯಗುರು ಶ್ರೀ ದೇವಾನಂದ ಭಟ್ ವ್ಯಕ್ತಪಡಿಸಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀ ರವಿಪ್ರಸಾದ್ ಶೆಟ್ಟಿ ಮೂಡಬಿದಿರೆ ಸಂಯೋಜಿಸಿ, ಶ್ರೀ ರಮೇಶ್ ಶೆಟ್ಟಿಗಾರ್ ಕಾರ್ಯಕ್ರಮ ನಿರೂಪಿಸಿದರು, ಬಳಿಕ ಮಕ್ಕಳಿಗೆ ನಾಟ್ಯ ತರಬೇತಿ ನೀಡಲಾಯಿತು.

## ಪಾದೆಬೆಟ್ಟಿನಲ್ಲಿ ವೈದಿಕ ಶಿಬಿರದ ಸಮಾರೋಪ

■...1ನೇ ಪುಟದಿಂದ

ವಾಸುದೇವರಾವ್, ಎ. ಬಿ.ಸಿ.ಡಿ ಟ್ರಸ್ಟ್ ಇನ್ನ ದ ಶ್ರೀ ಲಕ್ಷ್ಮೀಕಾಂತ ರಾವ್, ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ನ ಶ್ರೀ ವೈ ಭುವನೇಂದ್ರ ರಾವ್, ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದ ಮೊಕ್ತೇಸರ ಶ್ರೀ ಬಿ. ಜಯರಾಮ ರಾವ್ ಹಾಗೂ ಬ್ರಹ್ಮಶ್ರೀ ಕೃಷ್ಣರಾಜ ಭಟ್ ರವರು ಉಪಸ್ಥಿತರಿದ್ದರು.


ಶ್ರೀ ವೈ ಭುವನೇಂದ್ರರಾವ್ , ಶ್ರೀ ಕೃಷ್ಣರಾಜ ಭಟ್, ಶ್ರೀ ಭುವನಾಭಿರಾಮ ಸ್ವಾಮಿ, ಶ್ರೀ ಭವಾನಿಶಂಕರ ಉಪಾಧ್ಯಾಯ ಇವರು ವಟುಗಳಿಗೆ ಹಿತವಚನವನ್ನು ನೀಡಿದರು. ಮಕ್ಕಳಲ್ಲಿ ಹಾಗೂ ಮನೆಯಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಸಿಕೊಳ್ಳಲು ಒತ್ತು ನೀಡುವಂತೆ ಹಿರಿಯರಿಗೆ ಕಿವಿಮಾತು ಹೇಳಿದರು. ಸಂಘಟಕರಿಗೂ, ಪ್ರತಿನಿತ್ಯ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತಿದ್ದ ಶ್ರೀ ಎಂ.ಕೆ ದಿವಾಕರ ರಾಯರು ಹಾಗೂ ಪಡುಬಿದ್ರೆ ಸಂಘದ ಕಾರ್ಯಕರ್ತರಿಗೂ ತಮ್ಮ ಅಭಿನಂದನೆಗಳನ್ನು ತಿಳಿಸಿದರು. ಶ್ರೀಮತಿ ಸೀತಾದೇವಿ ಭಾಸ್ಕರ ರಾವ್ ಧನ್ಯವಾದವನ್ನಿತ್ತರು. ಅರುಣ್ ಕುಮಾರ್ ಮುಂಡ್ಕೂರು ಇವರು ಕಾರ್ಯಕ್ರಮ ನಿರ್ವಹಿಸಿದರು

# ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ನರಸಿಂಹ ಜಯಂತಿ

ತಾ.20–05–2016 ನೇ ಶುಕ್ರವಾರ ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ನರಸಿಂಹ ಜಯಂತಿಯ ಆಚರಣೆಯು ವಿಜೃಂಭಣೆಯಿಂದ ನಡೆಯಿತು. ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಇತರ ಋತ್ವಿಜರೊಂದಿಗೆ ವಿಧಿವತ್ತಾಗಿ ಪೂಜಾಕಾರ್ಯವನ್ನು ನೆರವೇರಿಸಿದರು. ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ ಮಹಿಳಾ ವೇದಿಕೆಯ ಸದಸ್ಯರಿಂದ ವಿಷ್ಣುಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನದ ಮಹಾಪೂಜೆಯ ನಂತರ ಅನ್ನಸಂತರ್ಪಣೆ ನಡೆಯಿತು. ಇನ್ನೂರಕ್ಕೂ ಮಿಕ್ಕಿ ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ರಾತ್ರಿ ಶ್ರೀ ದೇವರಿಗೆ ರಂಗಪೂಜೆಯು ನಡೆಯಿತು. ಭಕ್ತಾಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದ ಭೋಜನವನ್ನು ಸ್ವೀಕರಿಸಿದರು. ಬ್ರಹ್ಮಶ್ರೀಗಳಾದ ನಾಗಭೂಷಣ ಭಟ್, ಸುಬ್ರಹ್ಮಣ್ಯ ಭಟ್, ಕೃಷ್ಣರಾಜ ಭಟ್, ಪ್ರತಾಪ ಭಟ್ ಇವರು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಈ ಎಲ್ಲಾ ಪೂಜೆಗಳನ್ನು ನೆರವೇರಿಸಿದರು. ದೇವಳದ ಭಕ್ತರೂ ಸಮಾಜಸೇವಾಸಕ್ತರೂ ಆದ ಅದಾನಿ ಗ್ರೂಪಿನ ಕಾರ್ಯನಿರ್ವಾಹಕ ನಿರ್ದೇಶಕ ಶ್ರೀ ಕಿಶೋರ್‌ರವರನ್ನು ಸನ್ಮಾನಿಸಲಾಯಿತು. ಅದಾನಿ ಗ್ರೂಪಿನ ಅಸೋಸಿಯೇಟ್ ಜನರಲ್ ಮ್ಯಾನೇಜರ್ ಶ್ರೀ ಗಿರೀಶ್ ಹಾಗೂ ಸಹಾಯಕ ಮಹಾ ಪ್ರಬಂಧಕ ಶ್ರೀ ಸುದರ್ಶನ್ ಪ್ರಸಾದ ಇವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಈ ಎಲ್ಲಾ ಕಾರ್ಯಕ್ರಮಗಳ ಹೊಣೆಗಾರಿಕೆಯನ್ನು ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರು ವಹಿಸಿಕೊಂಡಿದ್ದು ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದ ಮೊಕ್ತೇಸರ ಶ್ರೀ ಬಿ. ಜಯರಾಮ ರಾವ್ ಇವರು ಸಂಪೂರ್ಣ ಸಹಕಾರವನ್ನಿತ್ತರು. ನಮ್ಮ ಸಮಾಜದ ಹಿರಿಯರೂ ಕೊಡುಗೈ ದಾನಿಗಳೂ ಆದ ಶ್ರೀ ಕೊರೆಗಾಂ ಸುಬ್ಬರಾಯರು ಈ ಎಲ್ಲಾ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದು ಅವರಿಗೆ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಹಾಗೂ ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದ ಆಡಳಿತ ಮಂಡಳಿಯು ಧನ್ಯವಾದವನ್ನು ಅರ್ಪಿಸುತ್ತದೆ.

ವರದಿ : ಶ್ರೀಮತಿ ಸೀತಾದೇವಿ ಭಾಸ್ಕರ ರಾವ್


ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು.

ಫೋನ್ : 0820-2599093



ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.

ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

ವೇದಮೂರ್ತಿ ಚಿದಾನಂದ ಭಟ್

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್– 9886629697, 9986119865





ಎಮ್. ದೇವಾನಂದ್ ಭಟ್

Cell : 9845644556
9483913344



ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)

ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


# ಕಟೀಲು ಮೇಳದ ಹರಕೆ ಬಯಲಾಟ

ನಮ್ಮ ಸಂಘದ ಹಾಗೂ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾದ ಶ್ರೀ ಬಿ.ಜಯರಾಮ ರಾಯರು ಹಾಗೂ ಶ್ರೀಮತಿ ವೀಣಾ ದಂಪತಿಗಳು ಹಾಗೂ ಕುಟುಂಬದವರು ಸೇವಾರೂಪದಲ್ಲಿ ಪ್ರಾಯೋಜಿಸಿದ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯ "ಸಂಪೂರ್ಣ ದೇವಿ ಮಹಾತ್ಮೆ" ಯಕ್ಷಗಾನವು ಶ್ರೀ ಶಾರದಾ ಮಂಟಪದಲ್ಲಿ ತಾ 21–05–2016ರ ಶನಿವಾರ ರಾತ್ರಿ ನೆರವೇರಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ನಮ್ಮ ಸಮಾಜದ ಖ್ಯಾತ ವಿಮರ್ಶಕ ಹಾಗೂ ಸಾಹಿತಿ ಶ್ರೀ ಕೆ ಈಶ್ವರಯ್ಯ, ನಮ್ಮ ಸಮಾಜದ ಹಿರಿಯ ಗಣ್ಯವ್ಯಕ್ತಿ ಶ್ರೀ ಎಂ. ಬಾಲಚಂದ್ರರಾವ್, ಕಟೀಲು ಮೇಳದಲ್ಲಿ 40 ವರ್ಷಕಾಲ ಸೇವೆಸಲ್ಲಿಸಿದ ಅದರ ಸಂಚಾಲಕ ಹಾಗೂ ಕಲಾವಿದ ಶ್ರೀ ಸುಸಂಬಳೆ ವಿಶ್ವೇಶ್ವರ ಭಟ್, ಚೆಂಡೆ ಮದ್ದಳೆ ವಾದಕರಾಗಿ 40 ವರ್ಷಕಾಲ ಸೇವೆಸಲ್ಲಿಸಿದ ಮಣಿಮುಂಡ ಸುಬ್ರಹ್ಮಣ್ಯ ಶಾಸ್ತ್ರಿ, 50 ವರ್ಷಗಳಿಗೂ ಮಿಕ್ಕಿ ಮೇಳದ ಅರ್ಚಕರಾಗಿ ಸೇವೆ ಸಲ್ಲಿಸಿದ ಶ್ರೀ ಕಾಳಾವರ ಅನಂತರಾಮ ಭಟ್‌ರನ್ನು ಶ್ರೀ ಬಿ. ಜಯರಾಮರಾವ್ ದಂಪತಿಗಳು ಸನ್ಮಾನಿಸಿದರು. ಕರಾವಳಿ ಕರ್ನಾಟಕದ ಜನಮನದಲ್ಲಿ ಹಾಸು ಹೊಕ್ಕಾಗಿರುವ ಸಂಪದ್ಭರಿತ ಜಾನಪದ ರಂಗಕಲೆ ಯಕ್ಷಗಾನ. ಅದರ ವ್ಯಾಪ್ತಿ ಕರಾವಳಿಗಷ್ಟೇ ಸೀಮಿತವಾಗಿರುವುದು ಬೇಸರದ ವಿಚಾರ. ಅದು ನಡೆದುಬಂದ ದಾರಿಯಲ್ಲಿ ಅನೇಕ ಪ್ರಸ್ತುತ ಹಾಗೂ ಅಪ್ರಸ್ತುತ ಬದಲಾವಣೆಗಳಾಗಿವೆ, ಯಾವ ಬದಲಾವಣೆ ಬೇಕು ಯಾವುದು ಬೇಡ ಎಂದು ನಿರ್ಧರಿಸುವವರು ಪ್ರೇಕ್ಷಕರು ಎಂದು ಸನ್ಮಾನಕ್ಕೆ ಉತ್ತರಿಸಿದ ಶ್ರೀ ಎ ಈಶ್ವರಯ್ಯನವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಸಭಾಕಾರ್ಯಕ್ರಮವಾಗುತ್ತಿದ್ದಂತೆ ಆಗಮಿಸಿದ ಭಕ್ತರನ್ನು ಸುಗ್ರಾಸ ಭೋಜನದೊಂದಿಗೆ ಶ್ರೀ ಬಿ ಜಯರಾಮ ದಂಪತಿಗಳು ಸತ್ಕರಿಸಿದರು. ಆಗಮಿಸಿದವರೆಲ್ಲರೂ ಬೆಳಗಿನ ತನಕ ಯಕ್ಷಗಾನವನ್ನು ವೀಕ್ಷಿಸಿ ಪುಳಕಿತರಾದರು. ಶ್ರೀ ದೇವಾನಂದ ಭಟ್ ಬೆಳುವಾಯಿಯವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

# ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ

ಕುಂದಾಪುರ ಶ್ರೀ ಕುಂದೇಶ್ವರ ದೇವಸ್ಥಾನ ಹಾಗೂ ಕುಂದಾಪುರ ತಾಲೂಕು ಬ್ರಾಹ್ಮಣ ಪರಿಷತ್ತಿನ ಕುಂದಾಪುರ ವಲಯದ ಸಹಭಾಗಿತ್ವದಲ್ಲಿ "ರಾಷ್ಟ್ರೀಯ ಭಾವೈಕ್ಯದಲ್ಲಿ ಆದಿಶಂಕರರ ಪಾತ್ರ" ದ ಕುರಿತು ನಡೆದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಉಡುಪಿಯ ಡಾ। ವೈ ಸುದರ್ಶನ ರಾವ್ ( ಶ್ರೀ ಶಾರದಾ ಪತ್ರಿಕೆಯ ಸಂಪಾದಕರು) ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅವರು ತಾ. 11–05–2016ರಂದು ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿಯ ಪ್ರಯುಕ್ತ ನಡೆದ ಸಮಾರಂಭದಲ್ಲಿ ಈ ಬಹುಮಾನವನ್ನು ಸ್ವೀಕರಿಸಿದರು. ರಾಜ್ಯಾದ್ಯಂತ ಒಟ್ಟು 66 ಪ್ರಬಂಧಗಳು ಈ ಸ್ಪರ್ಧೆಗೆ ಬಂದಿದ್ದವು

# ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೆಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಟ್ಪಾಡಿ, ಪ್ರಫುಲ್ಲಚಂದ್ರ ರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬೆಳ್ಮಣ್ಣು ಆನಂದ ರಾವ್

# ರಾಷ್ಟ್ರೀಯ ಭಾವೈಕ್ಯದಲ್ಲಿ ಆದಿಶಂಕರರ ಪಾತ್ರ (ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನಿತ ಲೇಖನ)

**–ಡಾ। ವೈ. ಸುದರ್ಶನ ರಾವ್**

ನಾವು ಬಾಲಕರಾಗಿದ್ದಾಗ ಇತಿಹಾಸದ ಪಾಠದಲ್ಲಿ ಆದಿಶಂಕರರರು ಅದ್ವೈತ ಮತದ ಸ್ಥಾಪಕರು ಎಂದು ಕಲಿತಿದ್ದೆವು. ಆದರೆ ಮುಂದೆ ನಾವು ಬೌದ್ಧಿಕವಾಗಿ ಬೆಳೆದಂತೆ ಹಾಗೂ ಮುಖ್ಯವಾಗಿ ಶೃಂಗೇರಿ ಮಠದ ಸಂಪರ್ಕ ಬೆಳೆಸಿಕೊಂಡಂತೆ ಹಾಗೂ ಆಧ್ಯಾತ್ಮದಲ್ಲಿ ಆಸಕ್ತಿ ಚಿಗುರೊಡೆದಂತೆ ಆದಿಶಂಕರರ ಬಗ್ಗೆ ನಾವೇ ಸ್ವತಃ ಓದಿ ಅಭಿಪ್ರಾಯ ರೂಪಿಸಿಕೊಂಡಾಗ ಆದಿಶಂಕರರು ಕೇವಲ ಒಂದು ಮಠದ ಸ್ಥಾಪಕರಲ್ಲ, ಬದಲಾಗಿ ನಮ್ಮ ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಹಾಗೂ ಭಗವದ್ಗೀತೆಯಲ್ಲಿ ಅಡಕವಾಗಿದ್ದ ಅದ್ವೈತತತ್ವವನ್ನು ಜನರಿಗೆ ತಿಳಿಸಿ ಹೇಳಿದ ಮಹಾಮಹಿಮರು ಎಂದು ಮನಗಂಡಿದ್ದೇವೆ.

ಆದಿಶಂಕರರು ಸಂಕಷ್ಟದಲ್ಲಿದ್ದ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದವರು. ಅಳಿಯುತ್ತಿದ್ದ ವೇದ ಉಪನಿಷತ್ತುಗಳಿಗೆ ಭಾಷ್ಯವನ್ನು ರಚಿಸಿ "ಅರ್ಥವಾಗದ್ದು" ಎಂಬ ಅದರ ಹಣೆಪಟ್ಟಿಯನ್ನು ತೊಲಗಿಸಿದವರು. ಕಾಲ್ನಡಿಗೆಯಲ್ಲಿ ಇಡೀ ಭಾರತವನ್ನು ಮೂರು ಬಾರಿ ಸುತ್ತಿದ ಏಕೈಕ ಸನ್ಯಾಸಿ ಅವರು. ಆದುದರಿಂದ ಕೇವಲ ವೇದ ಉಪನಿಷತ್ತುಗಳ ಮರ್ಮ ಮಾತ್ರವಲ್ಲ, ಈ ದೇಶದ ಜನಸಾಮಾನ್ಯರ ನಾಡಿಮಿಡಿತ ಅವರಿಗೆ ತಿಳಿದಿದ್ದರೆ ಅದು ಆಶ್ಚರ್ಯವೇನಲ್ಲ. ಆದುದರಿಂದ ಈ ರಾಷ್ಟ್ರದ ಜನರನ್ನು ಒಂದುಗೂಡಿಸುವಲ್ಲಿ ಅವರ ಪಾತ್ರ ಖಂಡಿತಾ ಇತ್ತು ಹಾಗೂ ಈಗಲೂ ಇದೆ. ಅವರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತವು ಕೇವಲ ಧರ್ಮಕ್ಕೆ ಸಂಬಂಧಿಸಿದಾಗಿರದೇ ಯಾವುದೇ ದೇಶದ ಜನರನ್ನು ಎಂದಿಗೂ ಕೂಡ ಒಗ್ಗೂಡಿಸಲು ಸಹಾಯಕವಾಗಿದೆ. ಆದುದರಿಂದ "ರಾಷ್ಟ್ರೀಯ ಭಾವೈಕ್ಯದಲ್ಲಿ. ಆದಿಶಂಕರರ ಪಾತ್ರ" ಎಂಬ ಈ ವಿಷಯಕ್ಕೆ "ಆದಿಶಂಕರರು ಸ್ವತಃ ಆ ಕಾಲದಲ್ಲಿ ವಹಿಸಿದ ಪಾತ್ರ" ಮಾತ್ರವಲ್ಲ "ಅವರ ಬೋಧನೆಗಳು ಇಂದಿಗೂ ಭಾವೈಕ್ಯದ ವಿಷಯದಲ್ಲಿ ಪ್ರಸ್ತುತವಾಗಿವೆ"ಯೆಂಬ ಆಯಾಮವೂ ಇದೆ.

ಆದಿಶಂಕರರು ಈ ದೇಶದ ಭಾವೈಕ್ಯತೆಯಲ್ಲಿ ವಹಿಸಿದ ಪಾತ್ರವನ್ನು ತಿಳಿದುಕೊಳ್ಳಲು ಇತಿಹಾಸದ ಕೆಲವು ಅಂಶಗಳನ್ನು ಮೊದಲು ವಿವರಿಸಬೇಕಾಗುತ್ತದೆ. ಆದಿಶಂಕರರ ಕಾಲದ ಬಗ್ಗೆ ಇತಿಹಾಸಕಾರರಲ್ಲಿ ಸ್ಪಷ್ಟ ಅಭಿಪ್ರಾಯವಿಲ್ಲ. ತಮ್ಮ ಯಾವುದೇ ಕೃತಿಗಳಲ್ಲಿ ತಮ್ಮ ಬಗ್ಗೆ ಹೇಳಿಕೊಳ್ಳದಿರುವುದು, ಯಾವುದೇ ರಾಜ ಮಹಾರಾಜರ ಆಸ್ಥಾನದಲ್ಲಿ ರಾಜಗುರುಗಳಾಗಿರದೇ ಹಾಗೂ ದತ್ತಿ ಉಂಬಳಿ ಸ್ವೀಕರಿಸದೇ ಸ್ವಸಾಧನೆಯಿಂದಲೇ ಅವರು ಪ್ರಕಾಶಿಸಿರುವುದು ಇದಕ್ಕೆ ಕಾರಣ. ಇದೇ ಕಾರಣದಿಂದಾಗಿ ಅವರ ಬಗ್ಗೆ ಯಾವುದೇ ಆ ಕಾಲದ ಶಿಲಾಶಾಸನವಾಗಲಿ ತಾಮ್ರ ಪತ್ರವಾಗಲೀ ನಮಗೆ ದೊರೆತಿಲ್ಲ. ಅವರ ನೇರ ಶಿಷ್ಯರಾದ ಪದ್ಮಪಾದರು ರಚಿಸಿದ್ದೆನ್ನಲಾದ "ಶಂಕರ ದಿಗ್ವಿಜಯ" ಗ್ರಂಥವು ಲಭ್ಯವಿದ್ದಿದ್ದರೆ ಶ್ರೀ ಶಂಕರರ ಬಗ್ಗೆ ನೇರ ಮಾಹಿತಿ ಲಭ್ಯವಾಗುತ್ತಿತ್ತು. ಅದೂ ಲಭ್ಯವಿಲ್ಲ. ಈಗ ನಾವು ಉದಾಹರಿಸುವ "ಶಂಕರ ದಿಗ್ವಿಜಯ" ಗ್ರಂಥಗಳು ಶಂಕರರು ಕಾಲವಾದ ನಾಲ್ಕಾರು ಶತಮಾನಗಳ ನಂತರ ರಚಿಸಲಾದವುಗಳಾದುದರಿಂದ ಅವಕ್ಕೆ ಅಷ್ಟೊಂದು ಐತಿಹಾಸಿಕ ಮಹತ್ವವನ್ನು ನೀಡಲಾಗದು ಹಾಗೂ ಅವನ್ನು ಶಂಕರರ ಜೀವನದ ಬಗ್ಗೆ ನೀಡುವ ಐತಿಹಾಸಿಕ ಸಾಕ್ಷಿಗಳೆಂದು ಪರಿಗಣಿಸಲಾಗದು. ಆದರೂ ಆಚಾರ್ಯರು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ ಸ್ಥಳಗಳು, ವ್ಯಕ್ತಿಗಳು, ಮತ್ತು ಘಟನೆಗಳ ಕಾಲನಿರ್ಣಯ ಮಾಡುವ ಮೂಲಕ ಹಾಗೂ ಕೆಲವು ಆ ಕಾಲದ ದೇಶೀ ಹಾಗೂ ವಿದೇಶಿ ವ್ಯಕ್ತಿಗಳ ಬರಹಗಳಲ್ಲಿ ಆಚಾರ್ಯರ ಬಗ್ಗೆ ಇರುವ ಉಲ್ಲೇಖಗಳ ಆಧಾರದಲ್ಲಿ ಅವರ ಜೀವಿತಾವಧಿಯ ಕಾಲ ಕ್ರಿ.ಶ. 788 ರಿಂದ 820ನೇ ಇಸವಿ ಎಂದು ನಿರ್ಧಾರಕ್ಕೆ ಬರಲಾಗಿದೆ. ಅವರು ಜನಿಸಿದ್ದು ಈಗ ಕೇರಳ ರಾಜ್ಯದಲ್ಲಿರುವ ಕಾಲಟಿ ಎಂಬ ಗ್ರಾಮದಲ್ಲಿ, ಬ್ರಾಹ್ಮಣ ಕುಟುಂಬವೊಂದರಲ್ಲಿ.

ಈ ಕಾಲದಲ್ಲಿ ಅಂದರೆ ಕ್ರಿ.ಶ. 788 ರಿಂದ 820ನೇ ಇಸವಿಯಲ್ಲಿ ಭಾರತ ದೇಶದ ಪರಿಸ್ಥಿತಿ ಹೇಗಿತ್ತು ಎಂಬ ಅವಲೋಕನ ಅಗತ್ಯ. ಕ್ರಿ.ಪೂ. 5 ನೇ ಶತಮಾನದಲ್ಲಿ ಜನಿಸಿದ ಗೌತಮ ಬುದ್ಧನು ಸ್ಥಾಪಿಸಿದ ಬೌದ್ಧ ಧರ್ಮವು ಆ ಕಾಲದಲ್ಲಿ ರಾಜಾಶ್ರಯ ಪಡೆದು ಮುಖ್ಯವಾಹಿನಿಯಲ್ಲಿತ್ತು. ಅರಬರು ಭಾರತ ದೇಶದೊಂದಿಗೆ ವ್ಯಾಪಾರ ವಹಿವಾಟಿಗಾಗಿ ಸಂಪರ್ಕದಲ್ಲಿದ್ದರಾದರೂ ಇಸ್ಲಾಂ ಧರ್ಮವು ಭಾರತವನ್ನು ಪ್ರವೇಶಿಸಿರಲಿಲ್ಲ. ಸನಾತನ ಧರ್ಮವನ್ನು ಯಾರೂ ಆಗ ಹಿಂದೂ ಧರ್ಮ ಎಂದು ಕರೆಯುತ್ತಿರಲಿಲ್ಲ. ಜನರು ವರ್ಣಾಶ್ರಮ (ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ)ವನ್ನು ಪಾಲಿಸುತ್ತಿದ್ದರು.

ಕ್ರಿ.ಶ. 788 ರಿಂದ 820ನೇ ಇಸವಿಯನ್ನು ರಾಜಕೀಯವಾಗಿ ವಿಶ್ಲೇಷಿಸಿದಾಗ, ಶ್ರೀ ಶಂಕರರ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ರಾಷ್ಟ್ರಕೂಟರ ಆಳ್ವಿಕೆ ಇತ್ತು. ಧ್ರುವರಾಜ, ಅವನ ನಂತರ ಅವನ ಪುತ್ರ ಮೂರನೆಯ ಗೋವಿಂದ, ನಂತರ ಅಮೋಘವರ್ಷ ಎಂಬ ರಾಜರು ಶ್ರೀ ಶಂಕರರ ಕಾಲದಲ್ಲಿ ಆಳಿದ್ದರು. ಈ ರಾಜರು ಜೈನ ಧರ್ಮಿಗಳಾಗಿದ್ದರು. ಆದರೂ ವಿದ್ಯೆಗೆ, ಜ್ಞಾನಕ್ಕೆ, ಕಲೆಗೆ, ಸಾಹಿತ್ಯಕ್ಕೆ ಸಕಲ ಮನ್ನಣೆಗಳನ್ನು ನೀಡುತ್ತಿದ್ದರು. ಅಮೋಘವರ್ಷನು ಸ್ವತಃ ಕವಿಯಾಗಿದ್ದು ಅವನು ರಚಿಸಿದ "ಕವಿರಾಜ ಮಾರ್ಗ"ವು ಕನ್ನಡದ ಮೊದಲ ಸಾಹಿತ್ಯವೆಂದು ಪ್ರಸಿದ್ಧಿಯಾಗಿದೆ. ಇನ್ನೊಂದು ಕೃತಿಯಾದ "ಪ್ರಶ್ನೋತ್ತರ ರತ್ನಮಾಲಿಕಾ" ಎಂಬ ಗ್ರಂಥದ ಬಗ್ಗೆ ಅವನು ರಚಿಸಿದ್ದೋ ಅಥವಾ ಶ್ರೀ ಶಂಕರರು ರಚಿಸಿದ್ದೋ ಎಂದು ಸ್ವಲ್ಪ ಗೊಂದಲವಿದೆ. ಇನ್ನೂ ದಕ್ಷಿಣದಲ್ಲಿ ಪಾಂಡ್ಯರ ಆಳ್ವಿಕೆ ಇತ್ತು ಪಾಂಡ್ಯರು ಶೈವರಾಗಿದ್ದರೂ ಅವರಲ್ಲಿ ಶಾಕ್ತರು, ಕಾಪಾಲಿಕರು ಹಾಗೂ ಪ್ರಾಣಿಬಲಿ ಇತ್ಯಾದಿ ಕ್ರೂರ ಆಚರಣೆಗಳಿಗೆ ಮಹತ್ವನೀಡುವವರು ಇದ್ದರೆಂದು ತಿಳಿದು ಬರುತ್ತದೆ. ಗುಜರಾತ್ ಪ್ರಾಂತ್ಯದಲ್ಲಿದ್ದ ಪ್ರಾತಿಹಾರರು ಜೈನ ಧರ್ಮೀಯರು. ಪೂರ್ವದ ಬಂಗಾಳ, ಈಶಾನ್ಯ ಹಾಗೂ ದೇಶದ ಉತ್ತರ ಭಾಗ ಹಾಗು ಕಾನ್ನೋಜ್ ತನಕ ಪಾಲರ ಆಳ್ವಿಕೆ ಇತ್ತು. ಇವರು ಬೌದ್ಧ ಧರ್ಮೀಯರಾಗಿದ್ದರು. ಈಗಿನ ಅಫಘಾನಿಸ್ಥಾನದಲ್ಲಿ ಆಡಳಿತ ನಡೆಸುತ್ತಿದ್ದ ಗುಜ್ಜರರು ಸನಾತನ(ಹಿಂದೂ) ಧರ್ಮೀಯರಾಗಿದ್ದು ಪರಕೀಯರ ಆಳ್ವಿಕೆಗೆ ಪದೇ ಪದೇ ತುತ್ತಾಗುತ್ತಿದ್ದರು. ಮಧ್ಯಭಾರತದಲ್ಲಿ ಗುಪ್ತವಂಶದ ಕೊನೆಯ ರಾಜರುಗಳು ದುರ್ಬಲರಾಗಿದ್ದು ಅವರು ಬೌದ್ಧಧರ್ಮೀಯರಾಗಿದ್ದರು. ಈ ಎಲ್ಲಾ ರಾಜರುಗಳು ಪರಸ್ಪರ ದಾಳಿ ನಡೆಸಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ಹೋರಾಡುತ್ತಿದ್ದರು.

ಇತಿಹಾಸದ ಈ ಅಧ್ಯಯನದಿಂದ ತಿಳಿದು ಬರುವ ಅಂಶವೇನೆಂದರೆ ಭಾರತದೇಶವೆಂಬ ಕಲ್ಪನೆ ವೇದ ಪುರಾಣಗಳಲ್ಲಿತ್ತೇ ಹೊರತು ಈಗಿನ ಭಾರತದೇಶವೆಂಬ ಸಂವಿಧಾನಬದ್ಧ ಸಂಸ್ಥೆಯ ಅಸ್ತಿತ್ವ ಆಗ ಇರಲಿಲ್ಲ. ಪರಕೀಯರು ಸಂಪತ್ತು, ಸಂಸ್ಕೃತಿ, ಸಾಹಿತ್ಯ, ಕಲೆ ಹಾಗೂ ಜ್ಞಾನದ ಭಂಡಾರವಾಗಿದ್ದ ಈ ಭೂಭಾಗವನ್ನು ಭಾರತ ಎಂದು ಗುರುತಿಸಿ ಇಲ್ಲಿಗೆ ವ್ಯಾಪಾರ ಹಾಗೂ ಜ್ಞಾನಾರ್ಜನೆಗಾಗಿ ಬರುತ್ತಿದ್ದರು. ಆದರೆ ಈ ಭೂಭಾಗಕ್ಕೆ ಸ್ಪಷ್ಟವಾದ ಭೌತಿಕ ಗಡಿರೇಖೆ ಇರಲಿಲ್ಲ. ರಾಜಮಹಾರಾಜರ ಸಾಮರ್ಥ್ಯದ ಮೇಲೆ ಈ ಗಡಿ ರೇಖೆ ಬದಲಾಗುತ್ತಿತ್ತು. ಈ ಭೂಭಾಗವನ್ನಾಳುತ್ತಿದ್ದ ರಾಜರುಗಳೆಲ್ಲಿ ತಾವು ಭಾರತ ದೇಶದ ಭಾಗವಾಗಿದ್ದೇವೆಂದಾಗಲಿ, ತಾವು ಎಲ್ಲರೂ ಒಂದಾಗಿರಬೇಕು ಎಂಬ ಚಿಂತನೆಯಾಗಲೀ ಆಗ ಇರಲಿಲ್ಲ. ಪರಸ್ಪರ ಹೊಂಚುಹಾಕಿಕೊಂಡು, ಹೋರಾಡಿಕೊಂಡು ಇರುತ್ತಿದ್ದ ಈ ರಾಜರುಗಳು ನಿಜಾರ್ಥದಲ್ಲಿ ತಮ್ಮನ್ನು ತಾವೇ ನಿರ್ಬಲರನ್ನಾಗಿ ಮಾಡಿಕೊಳ್ಳುತ್ತಿದ್ದರು. ರಾಜಮಹಾರಾಜರ ಈ ದೂರದೃಷ್ಟಿಯ ಕೊರತೆ ಮುಂದೆ ಮುಸಲ್ಮಾನರು ಹಾಗೂ ಯುರೋಪಿಯನ್ನರು ಭಾರತದ ಅಧಿಕಾರವನ್ನು ವಶಪಡಿಸಿಕೊಳ್ಳುವ ಪರಿಸ್ಥಿತಿಗೆ ತಂದಿಟ್ಟಿತು.

ಆದರೆ ಪರಕೀಯರು ಎಲ್ಲೆಲ್ಲಿ ಸನಾತನ ಸಂಸ್ಕೃತಿ ಇತ್ತೋ ಅದನ್ನು ಭಾರತ ದೇಶ ಎಂದು ಗುರುತಿಸುತ್ತಿದ್ದರು ಎಂಬುದನ್ನು ಗಮನಿಸಬೇಕು. ಅಂದರೆ ಭಾರತ ದೇಶವನ್ನು ಭೌತಿಕವಾದ ಗಡಿಯಿಂದ ಗುರುತಿಸುವ ಬದಲು ಸನಾತನ ಸಂಸ್ಕೃತಿಯನ್ನಾಚರಿಸುವ ಜನರು ಎಲ್ಲಿಯ ತನಕ ಹರಡಿಕೊಂಡಿದ್ದರೊ ಅಲ್ಲಿಯ ತನಕ ಆ ಪ್ರದೇಶವನ್ನು ಭಾರತವೆಂದು ಕರೆಯುತ್ತಿದ್ದರು. ಇದನ್ನು ಸಾಂಸ್ಕೃತಿಕ ಗಡಿಯೆನ್ನಬಹುದೇ?

ಆ ಕಾಲದ ಹೆಚ್ಚಿನ ರಾಜರುಗಳು ಬೌದ್ಧ ಧರ್ಮೀಯರಾಗಿದ್ದರೂ ಪ್ರಜೆಗಳೆಲ್ಲರೂ ಬೌದ್ಧರಾಗಿರಲಿಲ್ಲ. ಹೆಚ್ಚಿನವರು ಸನಾತನ ಧರ್ಮೀಯರೇ ಆಗಿದ್ದರು. ಇಸ್ಲಾಂ ಧರ್ಮವಾಗಲೀ ಕ್ರೈಸ್ತ ಧರ್ಮವಾಗಲೀ ಭಾರತಕ್ಕೆ ಕಾಲಿಡದಿದ್ದರಿಂದ ನಮ್ಮವರಿಗೆ ಸನಾತನ ಧರ್ಮವೊಂದು ಪ್ರತ್ಯೇಕ ಧರ್ಮವೆಂದು ಅನಿಸಿದ್ದಿಲ್ಲ. ಸನಾತನ ಧರ್ಮಕ್ಕೆ ಪ್ರತ್ಯೇಕ ಅಸ್ತಿತ್ವಬೇಕು, ಅದಕ್ಕೊಂದು ಗುರುತಿಸುವಿಕೆ ಬೇಕು ಎಂಬ ಅನಿಸುವಿಕೆಯೂ ಆಗ ಇರಲಿಲ್ಲ. ಬೌದ್ಧಧರ್ಮದ "ದೇವರಿಲ್ಲ, ಆತ್ಮನಿಲ್ಲ" ಎಂಬ ನಿರೀಶ್ವರ ವಾದವು ಸನಾತನ ಧರ್ಮದ ಚಿಂತನೆಗಳಿಗೆ ವಿರುದ್ಧವಾದುದರಿಂದ ವೇದ ಉಪನಿಷತ್ತುಗಳ ನಿಜಾರ್ಥವನ್ನು ಅರ್ಥಮಾಡಿಕೊಂಡಿದ್ದವರಿಗೆ, ಬೌದ್ಧಧರ್ಮದ ಅಲೆಯಲ್ಲಿ ಅಮೂಲ್ಯವಾದ ವೇದ ಉಪನಿಷತ್ತುಗಳು ನಾಶವಾದಾವು ಎಂಬ ಭಯ ಆಗಷ್ಟೆ ಆರಂಭವಾಗಿತ್ತು ಎಂದು ಕಾಣುತ್ತದೆ. ಈ ನಿಟ್ಟಿನಲ್ಲಿ ಸನಾತನ ಧರ್ಮದ ರಕ್ಷಣೆಗಾಗಿ ಕಾರ್ಯಪ್ರವೃತ್ತರಾದವರಲ್ಲಿ ಕುಮಾರಿಲಭಟ್ಟರು ಮೊದಲಿಗರು.

ಭಾರತದಲ್ಲಿ ಆರಂಭವಾದ ಬೌದ್ಧ ಧರ್ಮವು ಚೀನ ಬರ್ಮಾ ಇತ್ಯಾದಿ ಈಶಾನ್ಯದೇಶಗಳಿಗೆ ಹರಡಿತ್ತು. ಚೀನಾದ ಕಡೆಯಿಂದ ಹೂಣರು ನಿಧಾನವಾಗಿ ಈಶಾನ್ಯಭಾರತದಲ್ಲಿ ನುಸುಳಲಾರಂಭಿಸಿದರು ಹಾಗೂ ಈಶಾನ್ಯಭಾರತದ ಜನರೊಂದಿಗೆ ಬೆರೆತುಕೊಂಡರು. ಬೌದ್ಧರಾದ ಹೂಣರಿಂದ ಈಶಾನ್ಯ ಭಾರತದ ಸಾಂಸ್ಕೃತಿಕ ಗಡಿ ಅಪಾಯಕ್ಕೊಳಗಾದುದನ್ನು ಗಮನಿಸಿರಿ. ಭಾರತದ ನಾಲ್ಕು ದಿಕ್ಕುಗಳಲ್ಲೂ ಬೌದ್ಧ ಹಾಗೂ ಜೈನರಿಂದಾಗಿ ಭಾರತದ ಸಾಂಸ್ಕೃತಿಕ ಗಡಿಗಳು ದುರ್ಬಲವಾಗುತ್ತಿದ್ದುದಕ್ಕೆ ಇದೊಂದು ಉದಾಹರಣೆ. ಸ್ಪಷ್ಟ ಭೌತಿಕ ಗಡಿರೇಖೆಗಳಿರದ ಭಾರತವನ್ನು ಭಾರತವಾಗಿಯೇ ಉಳಿಸಿಕೊಳ್ಳುವುದೆಂದರೆ ಸಾಂಸ್ಕೃತಿಕ ಗಡಿಗಳನ್ನು ಬಲಪಡಿಸುವುದರಿಂದ ಮಾತ್ರ ಸಾಧ್ಯವಿತ್ತು ಅಲ್ಲವೇ?

ಇದು ಒಂದು ತರ್ಕವಾದರೆ ನಮ್ಮ ಸ್ವಂತ ಹುಳುಕುಗಳಿಂದ ಭಾರತವು (ಅಂದರೆ ಸನಾತನ ಧರ್ಮವು) ದುರ್ಬಲವಾಗುತ್ತಿತ್ತು. ಶೈವರು, ವೈಷ್ಣವರು, ಗಾಣಪತರು, ಕಾಪಾಲಿಕರು, ಶಾಕ್ತರು, ಚಾರ್ವಾಕರು, ದೇವಿಯ ಆರಾಧಕರು ಎಂಬ ಸನಾತನ ಧರ್ಮದ ನೂರಾರು ಪಂಥಗಳು ತಮ್ಮೆಲ್ಲರ ಮೂಲವು ಸನಾತನ ಧರ್ಮ ಎಂಬ ಅರಿವಿಲ್ಲದೇ ಒಬ್ಬರನ್ನೊಬ್ಬರು ಬೇರೇ ಎಂದು ಪರಿಗಣಿಸಿ ಪರಸ್ಪರ ಖಂಡಿಸುತ್ತಿದ್ದರು, ಹೀಯಾಳಿಸುತ್ತಿದ್ದರು, ದ್ವೇಷಿಸುತ್ತಿದ್ದರು. ತಮ್ಮ ಆಚಾರವೇ ಸರಿ, ತಮ್ಮ ದೇವರೇ ದೊಡ್ಡವನು ಎಂಬ ಒಳಜಗಳಗಳಿಂದಾಗಿ ಭಾರತದ ಜನರಲ್ಲಿ ಒಗ್ಗಟ್ಟೆಂಬುದೇ ಇಲ್ಲವಾಗಿತ್ತು.

ವರ್ಣಾಶ್ರಮ ಪದ್ಧತಿಯು ಸನಾತನ ಧರ್ಮದ ಇನ್ನೊಂದು ಹುಳುಕು. ಸನಾತನ ಧರ್ಮವನ್ನು ಸಾವಿರ ಚೂರು ಮಾಡಿದ ಹೆಗ್ಗಳಿಕೆ ಇದಕ್ಕೆ. ಮೂಲತಃ ವರ್ಣಾಶ್ರಮದಲ್ಲಿ ಭೇದಭಾವದ ಕಲ್ಪನೆ ಇಲ್ಲವಾಗಿದ್ದರೂ ಆಚರಣೆಯಲ್ಲಿದ್ದ "ತಾನು ಶ್ರೇಷ್ಠ, ಅವನು ನಿಕೃಷ್ಟ" ಎಂಬ ಭಾವನೆಯು ಸನಾತನ ಧರ್ಮಕ್ಕೆ ಊಹಿಸಲಸಾಧ್ಯವಾದ ಹಾನಿಯನ್ನು ಮಾಡಿದೆ. ಮೇಲ್ವರ್ಗದವರ ಈ ಮನಸ್ಥಿತಿಯಿಂದಾಗಿ ಜನರಿಗೆ ಬೌದ್ಧಧರ್ಮದಲ್ಲಿದ್ದ ಸಹಭ್ರಾತೃತ್ವದ ಕಲ್ಪನೆ ಅಪ್ಯಾಯಮಾನವಾಗಿ ಕಾಣುತ್ತಿತ್ತು.

ಬ್ರಾಹ್ಮಣರಲ್ಲಿಯೂ ಜ್ಞಾನಾರ್ಜನೆಗಿಂತ ಕರ್ಮಾಚರಣೆಗೆ ಒತ್ತು ನೀಡಲಾಗುತ್ತಿತ್ತು. ವೇದ ಉಪನಿಷತ್ತುಗಳನ್ನು ಅದರ ನಿಜಾರ್ಥದಲ್ಲಿ ಅಭ್ಯಯಿಸುವವರೇ ಇಲ್ಲವಾಗಿದ್ದರು. ಕಠಿಣ ಕರ್ಮಾಚರಣೆಯ ಕಷ್ಟ ಮಾತ್ರವಲ್ಲದೇ ಕರ್ಮಾಚರಣೆಯಲ್ಲಾಗುವ ತಪ್ಪುಗಳಿಗಿರುವ ದುಷ್ಫಲಗಳ ಹೆದರಿಕೆ, ಸರಿಯಾದ ಆಚರಣೆ ಏನು ಎಂಬ ಗೊಂದಲ, ತಾನು ಮಾಡಿದ್ದೇ ಸರಿ ಎಂಬ ಮೊಂಡುತನ ಇವೆಲ್ಲವು ವೈದಿಕ ಧರ್ಮಕ್ಕೆ ಮುಳುವಾಗತೊಡಗಿದವು.

ಇಂತಹಾ ಸಂದರ್ಭದಲ್ಲಿ ಧ್ರುವ ತಾರೆಯಾಗಿ ಮೂಡಿ ಬಂದವರು ಶ್ರೀ ಶ್ರೀ ಶಂಕರಾಚಾರ್ಯರು.

ಸನಾತನ ಧರ್ಮವನ್ನು ರಕ್ಷಿಸಿದರೆ ಈ ದೇಶವನ್ನು ರಕ್ಷಿಸಿದಂತೆ. "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ:" ಎಂಬ ಭಗವಂತನ ಉವಾಚದಂತೆ ಇಂತಹಾ ವಿಪ್ಲವ ಕಾಲದಲ್ಲಿ ಧರ್ಮರಕ್ಷಣೆಗಾಗಿಯೆ ಭಗವಾನ್ ಶಂಕರನು ಭೂಲೋಕದಲ್ಲಿ ಶಂಕರಾಚಾರ್ಯರಾಗಿ ಜನಿಸಿದನು ಎಂದು ಭಕ್ತರು ನಂಬುತ್ತಾರೆ. ಶ್ರೀ ಶ್ರೀ ಶಂಕರಾಚಾರ್ಯರ ಜೀವನವೂ, ಅವರು ತಮ್ಮ ಕಾರ್ಯವನ್ನು ಸಾಧಿಸಿದ ರೀತಿಯೂ ಭಕ್ತರ ಈ ನಂಬಿಕೆಗೆ ಇಂಬು ಕೊಡುವಂತೆಯೇ ಇದೆ. ತಾನು ಜೀವಿಸಿದ ಮೂವತ್ತೆರಡು ವರ್ಷಗಳಲ್ಲಿ ಸನಾತನ ಧರ್ಮದ ಸಕಲ ವಿದ್ಯೆಗಳಲ್ಲಿ ಪಾರಂಗತರಾಗಿ, ಯಾವುದೇ ಜಿಜ್ಞಾಸೆಯಿಲ್ಲದಂತೆ ಎಲ್ಲರಿಗೂ ಅರ್ಥವಾಗುವಂತೆ ಇಂದಿಗೂ ಪ್ರಸ್ತುತವೆನಿಸಿರುವ ಭಾಷ್ಯಗಳನ್ನು ಬರೆದು ಅವುಗಳನ್ನು ಅರ್ಥೈಸಿಕೊಳ್ಳುವುದರಲ್ಲಿದ್ದ ಗೊಂದಲವನ್ನು ಮೊದಲು ನಿವಾರಿಸಿದರು. ಅವರು ಸ್ವತಃ ಭಾಷ್ಯಗಳನ್ನು ಬರೆದ ಗ್ರಂಥಗಳು ಯಾವುವೆಂದರೆ ಬ್ರಹ್ಮಸೂತ್ರ, ಐತರೇಯ ಉಪನಿಷತ್, ಬೃಹದಾರಣ್ಯಕ, ಐಶೋಪನಿಶತ್, ತೈತ್ತಿರೇಯ, ಕಠೋಪನಿಶತ್, ಪ್ರಶ್ನೋಪನಿಶತ್, ಛಂದೋಗ್ಯ ಉಪನಿಷತ್, ಯುಜುರ್ವೇದ, ಮಾಂಡೂಕ್ಯ ಉಪನಿಷತ್, ಗೌಡಪಾದಾಕಾರಿಕ, ಭಗವದ್ಗೀತಾ, ಮಹಾಭಾರತ, ವಿಷ್ಣು ಸಹಸ್ರನಾಮ, ಗಾಯತ್ರೀಮಂತ್ರ ಇತ್ಯಾದಿ. ಇನ್ನೂ ಅನೇಕ ಗ್ರಂಥಗಳಿಗೆ ತಮ್ಮ ಶಿಷ್ಯರಿಂದ ಭಾಷ್ಯಗಳನ್ನು ಹಾಗೂ ವಾರ್ತಿಕೆಗಳನ್ನು ಬರೆಯಿಸಿದರು. ತಮ್ಮ ಭಾಷ್ಯಗಳಲ್ಲಿ

(6ನೇ ಪುಟಕ್ಕೆ...)

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

## ರಾಷ್ಟ್ರೀಯ ಭಾವೈಕ್ಯದಲ್ಲಿ ಆದಿಶಂಕರರ ಪಾತ್ರ

■...5ನೇ ಪುಟದಿಂದ

ಕರ್ಮಾಚರಣೆಗಿಂತ ಜ್ಞಾನಾರ್ಜನೆಗೆ ಒತ್ತು ನೀಡಿದರು. ಕರ್ಮಠರಾಗಿದ್ದ ಮಂಡನ ಮಿಶ್ರರನ್ನು ವಾದದಲ್ಲಿ ಸೋಲಿಸಿ ಅವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡದ್ದು ಈ ನಿಟ್ಟಿನಲ್ಲಿ ಆಚಾರ್ಯರದ್ದೊಂದು ಸಾಧನೆ.

ಇದು ವಿದ್ವಾಂಸರ ಮಾತಾಯಿತು. ಇಂತಹ ಕಠಿಣ ಗ್ರಂಥಗಳನ್ನು ಅರ್ಥೈಸಿಕೊಳ್ಳಲಾಗದ ಪಾಮರರ ಪಾಡೇನು?. ಮೃತ್ಯುಶಯ್ಯೆಯಲ್ಲಿದ್ದ ಅವರ ತಾಯಿಗೆ ಅವರು ನಿರ್ಗುಣ ತತ್ವದ ಉಪದೇಶವನ್ನು ನೀಡಿದಾಗ ತನಗೆ ಅದನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲವೆಂದು ಆಕೆ ನುಡಿದದ್ದು ಇದಕ್ಕೆ ಉದಾಹರಣೆ. ಇಂತಹಾ ಮುಗ್ಧರಿಗಾಗಿ ಆತ್ಮಶುದ್ಧಿಗಾಗಿ, ಧೈರ್ಯ ಸ್ಥೈರ್ಯ ಮನಃಶಾಂತಿಯನ್ನು ನೀಡುವ ಶ್ಲೋಕಗಳುಳ್ಳ ಪ್ರಾಕರಗ್ರಂಥಗಳನ್ನು ರಚಿಸಿದರು. ಅಚ್ಯುತಾಷ್ಟಕ, ಸೌಂದಯಲಹರಿ, ಶಿವಭುಜಂಗ ಪ್ರಾಯಾತ, ಕಾಲಭೈರವಾಷ್ಟಕ, ಲಲಿತಾ ಪಂಚರತ್ನ, ಶಾರದಾ ಭುಜಂಗ, ಕನಕಧಾರಾಸ್ತೋತ್ರ, ಗಣೇಶ ಭುಜಂಗ, ಕೃಷ್ಣಾಷ್ಟಕ, ಶ್ರೀವಿಷ್ಣುಭುಜಂಗಪ್ರಯಾತ ಸ್ತೋತ್ರ, ಹನುಮಂತ್ಪಂಚರತ್ನ, ಸುಬ್ರಹ್ಮಣ್ಯಭುಜಂಗ ಹೀಗೆ ನೂರಾರು ಸ್ತೋತ್ರಗಳನ್ನು ರಚಿಸಿದರು. ಈ ಸ್ತೋತ್ರಗಳು ಭಕ್ತಿಪ್ರಧಾನವಾಗಿದ್ದು ದೇವರನ್ನು ಸ್ತುತಿಸುವಂತಾಗಿದ್ದು ಜನಸಾಮಾನ್ಯರಿಗೂ ಅರ್ಥವಾಗುವಂತಿದ್ದವು ಹಾಗೂ ಜನಪ್ರಿಯವಾದುವು. ಮೋಹಮುದ್ಗರ ಅಥವಾ ಭಜಗೋವಿಂದಂ ಇವರ ಅತ್ಯಂತ ಜನಪ್ರಿಯ ಕೃತಿ. ಇಹಲೋಕದ ಕ್ಷಣಿಕತೆಯನ್ನೂ, ಪರಮಾತ್ಮನ ಧ್ಯಾನದ ಹಾಗೂ ಅವನ ಕೃಪೆಯ ಅಗತ್ಯವನ್ನೂ ಸಾರಿ ಹೇಳುವ ಇದರ ಶ್ಲೋಕಗಳು ಜಗತ್ತಿನಾದ್ಯಂತ ಪ್ರಸಿದ್ಧವಾಗಿವೆ.

ಅನೇಕ ದೇವಾಲಯಗಳನ್ನು ಅವರು ಪುನರುಜ್ಜೀವನಗೊಳಿಸಿದರು. ಅವುಗಳಲ್ಲಿ ಕೇದಾರನಾಥ ದೇವಾಲಯವೂ ಒಂದು. ಬದರಿಯಲ್ಲಿ ಪಾಳು ಬಿದ್ದಿದ್ದ ವಿಷ್ಣು ದೇವಾಲಯದಲ್ಲಿ ದೇವರ ವಿಗ್ರಹವನ್ನು ಮರುಸ್ಥಾಪಿಸಿದರು. ಇದಕ್ಕೆ ತಮ್ಮ ತಾಯಿ ಆರ್ಯಾಂಭೆ ಕಳುಹಿಸಿದ ಧನವನ್ನು ವಿನಿಯೋಗಿಸಿದರು ಎಂದು ಹೇಳುತ್ತಾರೆ. ಕಾಂಚಿಯ ಕಾಮಾಕ್ಷಿ ದೇವಾಲಯವನ್ನು ಶ್ರೀ ಶಂಕರಾಚಾರ್ಯರೇ ಕಟ್ಟಿಸಿದ್ದು. ತಿರುಪತಿಯ ದೇವಾಲಯದಲ್ಲಿ ಶ್ರೀ ಯಂತ್ರವನ್ನು ಸ್ಥಾಪನೆಗೊಳಿಸಿ ಆ ದೇವಾಲಯವನ್ನು ಪ್ರಸಿದ್ಧಿಗೊಳಿಸಿದರು. ಶ್ರೀ ಶೈಲ, ಗೋಕರ್ಣ, ಕೊಲ್ಲೂರಿನ ದೇವಾಲಯಗಳಲ್ಲಿ ದೇವರ ಕ್ರಮಬದ್ಧ ಪೂಜೆಗೆ ಏರ್ಪಾಡು ಮಾಡಿದರು. ಕಾಶ್ಮೀರದ ಶ್ರೀ ಶಾರದಾಮಂದಿರದಲ್ಲಿ ಪಂಡಿತೋತ್ತಮರನ್ನು ವಾದದಲ್ಲಿ ಸೋಲಿಸಿ ಸರ್ವಜ್ಞಪೀಠಾರೋಹಣ ಮಾಡಿದರು.

ದೇವರ ಸೃಷ್ಟಿಯ ಪ್ರತಿಯೊಂದರಲ್ಲೂ ಭಗವಂತ(ಆತ್ಮ)ನನ್ನೇ ಕಾಣುವ ಅದ್ವೈತ ಸಿದ್ಧಾಂತವನ್ನು ಅವರು ಪ್ರಚಾರ ಮಾಡಿದರು. ಈ ಸಿದ್ಧಾಂತವನ್ನು ಈ ಕೆಳಗಿನ ದೃಷ್ಟಾಂತವು ಚೆನ್ನಾಗಿ ವಿವರಿಸುತ್ತದೆ. ಒಂದು ದಿನ ಕಾಶಿಯಲ್ಲಿ ಆಚಾರ್ಯರು ಶಿಷ್ಯರೊಂದಿಗೆ ಗಂಗಾನದಿಯ ತೀರಕ್ಕೆ ತೆರಳುತ್ತಿರುವಾಗ ಓರ್ವ ಚಾಂಡಾಲನು ನಾಲ್ಕು ನಾಯಿಗಳೊಂದಿಗೆ ಆಚಾರ್ಯರಿಗೆ ಅಡ್ಡ ಬಂದನು. ಅದನ್ನು ಕಂಡು ಆಚಾರ್ಯರು ಆತನನ್ನು ಕುರಿತು ದೂರ ಸರಿ, ದೂರ ಸರಿ ಎಂದು ನುಡಿದರು. ಆಗ ಆ ಚಾಂಡಾಲನು ಸ್ವಾಮೀ ತಾವು ದೂರ ಸರಿ ಎಂದದ್ದು ಯಾರಿಗೆ ?, ಈ ದೇಹಕ್ಕೋ ಅಥವಾ ಶ್ರುತಿ ಸ್ಮೃತಿ ಪುರಾಣಗಳೆಲ್ಲಾ ಸರ್ವರಲ್ಲೂ ಒಂದೇ ಆಗಿದೆ ಎಂದು ಸಾರುತಿರುವ ಆತ್ಮಕ್ಕೋ ಎಂದು ಕೇಳಿದನು. ತಕ್ಷಣವೇ ತಮ್ಮ ತಪ್ಪನ್ನರಿತ ಆಚಾರ್ಯರು ಆ ಚಾಂಡಾಲನಲ್ಲಿ ಸಾಕ್ಷಾತ್ ಪರಮೇಶ್ವರನ ರೂಪವನ್ನೇ ಕಂಡರು. ಅವನಿಗೆ ಅಯ್ಯಾ, ಯಾರಿಗೆ ಸಮಸ್ತ ಜಗತ್ತು ಆತ್ಮಸ್ವರೂಪವಾಗಿಯೇ ಕಾಣುತ್ತದೆಯೋ ಹಾಗೂ ಎಲ್ಲಾ ಜೀವ ಪ್ರಾಣಿಗಳಲ್ಲಿ ಬೆಳಗುತ್ತಿರುವ ಚೈತನ್ಯಕ್ಕೂ ತನ್ನಲ್ಲಿ ಬೆಳಗುತ್ತಿರುವ ಚೈತನ್ಯಕ್ಕೂ ಭೇದವಿಲ್ಲ ಎಂಬ ಜ್ಞಾನವಿರುತ್ತದೋ ಅವನನ್ನು ನನ್ನ ಗುರುವೆಂದೇ ಭಾವಿಸುತ್ತೇನೆ ಎಂದು ನುಡಿದು ತನ್ನ ಕಣ್ಣು ತೆರೆಸಿದ ಗುರುವೆಂದೇ ಆತನನ್ನು ಸ್ತುತಿಸಿದರು. ಈ ದೃಷ್ಟಾಂತದ ಮೂಲಕ ಆಚಾರ್ಯರು ಮೇಲು ಕೀಳೆಂಬ ಭಾವನೆ ತಪ್ಪು ಎಂದು ಸಾರಿದರು. ಆತ್ಮನು ಒಬ್ಬನೇ ಆಗಿದ್ದು ನಿರಾಕಾರ ನಿರ್ಗುಣನಾಗಿದ್ದು ಎಲ್ಲಾ ಕಡೆಯೂ ಹರಡಿಕೊಂಡಿರುವವನೇ ಆಗಿದ್ದು ಆತ್ಮಸಾಕ್ಷಾತ್ಕಾರಕ್ಕೆ ಮೂರ್ತಿಪೂಜೆಯ (ಕರ್ಮಾಚರಣೆಯ) ಅಗತ್ಯವಿಲ್ಲವಾಗಿದ್ದರೂ, ಈ ಬ್ರಹ್ಮತತ್ವದ ಅರಿವು ಜನಸಾಮಾನ್ಯರಿಗೆ ಕಷ್ಟವಾದುದರಿಂದ ಭಗವಂತನನ್ನು ಸ್ತುತಿಸುವುದರ ಮೂಲಕ ಹಾಗೂ ಭಗವಂತನ ಮೂರ್ತಿಯನ್ನು ಪೂಜಿಸುವುದರ ಮೂಲಕ ಆತ್ಮಸಾಕ್ಷಾತ್ಕಾರ ಪಡೆಯಬಹುದೆಂದು ತಿಳಿಸಿದರು.

ಸನಾತನ ಧರ್ಮದಲ್ಲಿ ಬೇರೆ ಬೇರೆ ದೇವರನ್ನು ಆರಾಧಿಸುವವರನ್ನು ಒಟ್ಟುಗೂಡಿಸಲು ವಿವಿಧ ಪಂಥಗಳಲ್ಲಿದ್ದ ವೇದ ವಿರುದ್ಧವಾದ ಆಚರಣೆಗಳನ್ನು ಖಂಡಿಸಿ ದೂರೀಕರಿಸಿದರು. ಶೈವ , ಶಾಕ್ತ, ವೈಷ್ಣವ, ಸೌರ, ಗಾಣಪತ್ಯ, ಕೌಮಾರ ಮತಗಳನ್ನು ಈ ರೀತಿ ಸುಸ್ಥಿತಿಗೊಳಿಸಿ ಪುನಃ ಸ್ಥಾಪಿಸಿ ಷಣ್ಮತ ಸ್ಥಾಪಕರೆನಿಸಿಕೊಂಡರು. ಎಲ್ಲರಿಗೂ ಸಮ್ಮತವಾಗುವಂತೆ ಸೂರ್ಯ, ಗಣಪತಿ, ಅಂಬಿಕಾ, ಶಿವ, ವಿಷ್ಣು ಈ ಐದು ದೇವರನ್ನೊಳಗೊಂಡ ಪಂಚಾಯತನ ಪೂಜಾ ಪದ್ಧತಿಯನ್ನು ಪ್ರಚಾರ ಮಾಡಿದರು. ಇದು ವಿವಿಧ ಪಂಥದೊಳಗಿದ್ದ ದ್ವೇಷವನ್ನು ನಿವಾರಣೆ ಮಾಡಿತು.

ಶೃಂಗೇರಿಯಲ್ಲಿ ಶ್ರೀ ಶಾರದೆಯ ಪೀಠವನ್ನು ಸ್ಥಾಪಿಸಿ ಬಹು ಕಾಲ ಅಲ್ಲಿ ಕಳೆದು ಧರ್ಮ ಪ್ರಚಾರವನ್ನು ಮಾಡಿದರು. ಅನೇಕ ಭಾಷ್ಯಗಳನ್ನು ಅವರು ರಚಿಸಿದ್ದು ಇಲ್ಲಿಯೇ. ಶ್ರೀಗಂಧದ ಸುಗಂಧವು ತನ್ನಿಂತಾನಾಗಿಯೇ ಎಲ್ಲಾ ಕಡೆಯೂ ಹರಡುವಂತೆ ಶ್ರೀ ಶಂಕರಾಚಾರ್ಯರ ಕೀರ್ತಿಯು ದೇಶದ ಎಲ್ಲಾ ಕಡೆಯೂ ಹರಡಿತು. ಅವರು ಜಗದ್ವಂದ್ಯರಾದರು, ಜಗದ್ಗುರುಗಳಾದರು. ಅನಂತರ ಉತ್ತರದ ಬದರಿಯಲ್ಲಿ. ಪಶ್ಚಿಮದ ದ್ವಾರಕೆಯಲ್ಲಿ, ಪೂರ್ವದ ಪುರಿಯಲ್ಲಿ ಇನ್ನೂ ಮೂರು ಆಮ್ನಾಯ ಪೀಠಗಳನ್ನು ಸ್ಥಾಪಿಸಿ, ಅಲ್ಲಿ ತನ್ನ ಶಿಷ್ಯರನ್ನು ನೇಮಿಸಿ ಒಂದೊಂದು ಪೀಠಕ್ಕೆ ಒಂದೊಂದು ವೇದದ ಪ್ರಸಾರದ ಹೊಣೆಯನ್ನು ಒಪ್ಪಿಸಿದರು(ಶೃಂಗೇರಿ–ಋಗ್ವೇದ, ಪುರಿ–ಯಜುರ್ವೇದ, ದ್ವಾರಕೆ– ಸಾಮವೇದ, ಬದರಿ–ಅಥರ್ವಣ) ಹಾಗೆಯೆ ಇನ್ನುಳಿದ ಇತರ ಶಿಷ್ಯರನ್ನು ದೇಶದ ಮೂಲೆ ಮೂಲೆಗಳಲ್ಲಿ ಧರ್ಮ ಪ್ರಚಾರಕ್ಕೆಂದು ನೇಮಿಸಿ ತಮ್ಮ ಮೂವತ್ತೆರಡನೆ ವಯಸ್ಸಿನಲ್ಲಿ ಶ್ರೀ ಕೇದಾರನಾಥ ಕ್ಷೇತ್ರದಲ್ಲಿ ತಮ್ಮ ಶರೀರವನ್ನು ತ್ಯಜಿಸಿ ಬ್ರಹ್ಮೈಕ್ಯರಾದರು. ಅವರು ದೇಶದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳು ಧರ್ಮರಕ್ಷಣೆಯಲ್ಲಿ ಎಷ್ಟೊಂದು ಫಲಪ್ರದವಾಗಿವೆಯೆಂದರೆ ಅವರು ಗತಿಸಿ ಸಾವಿರದಿನ್ನೂರು ವರ್ಷಗಳು ಕಳೆದರೂ ಇಂದಿಗೂ ಅತ್ಯಂತ ಪರಿಪೂರ್ಣವಾಗಿ ಆಚಾರ್ಯರು ಅಂದುಕೊಂಡ ರೀತಿಯಲ್ಲಿಯೇ ತಮ್ಮ ಕಾರ್ಯವನ್ನು ನಡೆಸಿಕೊಂಡು ಬರುತ್ತಿವೆ.

ಇವಿಷ್ಟು ನಾನು ಅರ್ಥ ಮಾಡಿಕೊಂಡಂತೆ ಶ್ರೀ ಶ್ರೀ ಶಂಕರಾಚಾರ್ಯರು ರಾಷ್ಟ್ರೀಯ ಭಾವೈಕ್ಯತೆಯಲ್ಲಿ ವಹಿಸಿದ ಪಾತ್ರದ ವಿವರಣೆ. ಪ್ರಜೆಗಳಿಲ್ಲದೇ ದೇಶವಿಲ್ಲ. ದೇಶವಿಲ್ಲದೇ ಧರ್ಮವಿಲ್ಲ. ಹಾಗೆಯೇ ಧರ್ಮಭೀರುಗಳಾದ ಪ್ರಜೆಗಳಿದ್ದರೆ ಮಾತ್ರ ದೇಶಕ್ಕೆ ಶಾಶ್ವತ ಅಸ್ತಿತ್ವ ಸಾಧ್ಯ. ಶ್ರೀ ಶ್ರೀ ಶಂಕರಾಚಾರ್ಯರು ಯಾವುದೇ ರಾಜನ ಸಹಾಯವಿಲ್ಲದೇ, ಸೇನೆಯ ಬಲವಿಲ್ಲದೇ ಕೇವಲ ತಮ್ಮ ಜ್ಞಾನಬಲದಿಂದ ಈ ದೇಶದ ಜನರಲ್ಲಿ ಸನಾತನ ಧರ್ಮದ ಮೇಲಿನ ನಂಬಿಕೆಯನ್ನು ಮರುಸ್ಥಾಪಿಸಿದರು. ತಮ್ಮ ಸಿದ್ಧಾಂತಗಳಲ್ಲಿ ಹಳಿ ತಪ್ಪಿದ್ದ ಬೌದ್ಧರಿಗೆ ತಮ್ಮ ತಪ್ಪನ್ನು ಮನಗಾಣಿಸಿದರು. ಅವರನ್ನು ದೇಶದ ಸಂಸ್ಕೃತಿಯ ಮುಖ್ಯವಾಹಿನಿಯಲ್ಲಿ ಕರೆತಂದರು. ಅವರು ಬುದ್ಧನನ್ನು ಖಂಡಿಸಲಿಲ್ಲ. ಅದರ ಬದಲು ಆತನನ್ನು ವಿಷ್ಣುವಿನ ಅವತಾರವೆಂದೇ ಕರೆದರು. ಈ ಕಾರಣಗಳಿಂದಾಗಿ ನಮ್ಮ ದೇಶದಲ್ಲಿ ಬೌದ್ಧಧರ್ಮವು ಕಾಲಕ್ರಮೇಣ ಸನಾತನ ಧರ್ಮದಲ್ಲೇ ವಿಲೀನಗೊಂಡಿತು. ಹೀಗೆ ಸಕಲ ಪಂಥಗಳನ್ನೂ ಒಟ್ಟುಗೂಡಿಸಿ ಅವರು ಈ ದೇಶದ ಸಂಸ್ಕೃತಿಯನ್ನು ಪುನಃ ಕಟ್ಟಿದರು. ಹೀಗೆ ರಕ್ತಪಾತವಿಲ್ಲದೇ, ಬಲತ್ಕಾರ ಆಮಿಷಗಳಿಲ್ಲದೇ ಮೌನವಾಗಿಯೇ ನಡೆದ ಈ ಕ್ರಾಂತಿ ಭಗವಂತನಿಂದಲ್ಲದೇ ಬೇರೆ ಯಾರಿಂದ ಸಾಧ್ಯ?

## ಕವನಗಳು

### ಆದಿ

ಮೃಗಾಲಯದ ಒಂದು ದೊಡ್ಡ ಮರ
ಅದರ ಕೆಳಗೆ ಸುಂದರ ಸಂಸಾರ
ಕೋಳಿ ಮತ್ತು ಮರಿಗಳು ನಾಲ್ಕು
ಚಿಲಿಪಿಲಿಗುಟ್ಟುತ್ತಿವೆ ಹಸಿವೆಯಲಿ
ಬೋನಿನವ ಇವಕ್ಕೆ ಕಾಳು ಹಾಕೋದೇ ಮರೆತಂತಿದ್ದ
ತಾಯಿ ತಾನೂ ಹಸಿದಿದೆ
ಮಕ್ಕಳಿಗೆಲ್ಲಿ ಕೊಟ್ಟೀತು ಪಾಪ

### ಮಧ್ಯ

ಹಸಿವೆಯ ತೀವ್ರತೆಯಿಂದ ಕಂಗೆಟ್ಟ
ಮರಿಯೊಂದು ಬಿದ್ದೇ ಬಿಟ್ಟಿತು ನೆಲಕ್ಕೆ
ಅದನ್ನೇ ಕಾಳೆಂದುಕೊಂಡು ಕುಕ್ಕಿದವು ಉಳಿದವು
ಅದರ ರಕ್ತ ಮಾಂಸವನ್ನೇ ಮತ್ತೆ ಮತ್ತೆ !
ತಾಯಿ ಪಾಪ ಏನು ಮಾಡೀತು ಸ್ವಲ್ಪ ಹೊತ್ತಿನಲ್ಲೇ
ಅದೂ ಮಕ್ಕಳ ಜತೆಗೇ ಸೇರಿತು

–ಬೆಳ್ಳಾಲ ಗೋಪೀನಾಥ ರಾವ್

SAMPATH KUMAR
Mobile : 9741508881
8884873233
TRISHULINI TOURIST
The Tourist People
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

With Best Complimemts From
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ದ.ಕ. ಜಿಲ್ಲಾ ಸಮಿತಿಯ ಶಂಕರ ಜಯಂತಿ

ಶಂಕರ ಜಯಂತಿ ಜಿಲ್ಲಾ ಸಮಿತಿಯ ವತಿಯಿಂದ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ 'ಶಂಕರ ಜಯಂತಿ'ಯನ್ನು ತಾ.22-5-2016ರಂದು ಆಚರಿಸಲಾಯಿತು. ಪ್ರಾತ; ಕಾಲದಲ್ಲಿ ಗಣಪತಿ ಪೂಜೆ, ರುದ್ರಾಭಿಷೇಕ, ರುದ್ರ ಪಠಣ ವಿವಿಧ ಪಾರಾಯಣಗಳು ನಡೆದವು. ಮಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಕುಮಾರ ಸುಬ್ರಹ್ಮಣ್ಯ ತಮ್ಮ ಧಾರ್ಮಿಕ ಪ್ರವಚನದಲ್ಲಿ ಶಂಕರ ಭಗವತ್ಪಾದರು ಸನಾತನ ವೈದಿಕ ಧರ್ಮವನ್ನು ಅದ್ವೈತ ಸಿದ್ಧಾಂತದ ಮೂಲಕ ಪುನರುಜ್ಜೀವನಗೊಳಿಸಿ ಅದನ್ನು ಎಲ್ಲಾ ಕಡೆ ಹೇಗೆ ಪ್ರವರ್ತಿಸುವಂತೆ ಮಾಡಿದರೆಂಬುದನ್ನು ವಿವರವಾಗಿ ತಿಳಿಸಿದರು. ಈ ಮಹಾತ್ಮರು ಮಾಡಿದ ಉಪಕಾರವನ್ನು ದಿನಂಪ್ರತಿ ಅವರ ಅಷ್ಟೋತ್ತರ ಶತನಾಮಾವಳಿ ಪಠಣ ಮಾಡುವ ಮೂಲಕ ಶ್ರೇಯಸ್ಸಿಗೆ ಭಾಜನರಾಗಬೇಕೆಂದು ಕರೆನೀಡಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಂ ಆರ್ ವಾಸುದೇವ ಅವರು ಅಧ್ಯಕ್ಷೀಯ ಭಾಷಣದಲ್ಲಿ ಶಂಕರ ಭಗತ್ಪಾದರನ್ನು ಆರಾಧಿಸಿ ಅದರಿಂದ ಪ್ರತಿಯೊಬ್ಬ ಆಸ್ತಿಕ ಶ್ರೇಯಸ್ಸನ್ನು ಪಡೆಯಿರಿ ಮತ್ತು ಲೋಕಕ್ಕೆ ಕಲ್ಯಾಣವಾಗಲಿ ಎಂದು ಆಶಿಸಿದರು. ಜಿಲ್ಲಾ ಸಮಿತಿಯ ಶ್ರೀ ಶ್ರೀಧರ ಶಾಸ್ತ್ರಿ ರವರು ಕಾರ್ಯಕ್ರಮ ಸಂಯೋಜಿಸಿದರೆ ಶ್ರೀ ಪಿ. ಶ್ರೀಕಾಂತ ಧನ್ಯವಾದ ಸಮರ್ಪಿಸಿದರು. ಮಧ್ಯಾಹ್ನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಜನೆ, ಭರತನಾಟ್ಯಗಳು ನಡೆದು ಭಕ್ತರನ್ನು ಮುದಗೊಳಿಸಿದವು.

ವರದಿ : **ಶ್ರೀ ಶ್ರೀಕಾಂತ ರಾವ್**

## ಪಡುಬಿದ್ರೆಯಲ್ಲಿ ಶ್ರೀ ಶಂಕರ ಜಯಂತ್ಯುತ್ಸವ

ಧಾರ್ಮಿಕ ಸಂಘರ್ಷದಿಂದ ಪತನದತ್ತ ಸಾಗುತ್ತಿದ್ದ ಭಾರತದ ಸನಾತನ ಧರ್ಮವನ್ನು ಒಗ್ಗೂಡಿಸಿ ಸಂರಕ್ಷಿಸಿದ ಶ್ರೀ ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವವನ್ನು ತಾ. 11-05-2016ರ ಬುಧವಾರ ಪಡುಬಿದ್ರೆಯ ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದಲ್ಲಿ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇವರ ಸಹಯೋಗದೊಂದಿಗೆ ಆಚರಿಸಲಾಯಿತು. ಬ್ರಹ್ಮಶ್ರೀ ಕೃಷ್ಣರಾಜ ಭಟ್ ಇವರು ಶ್ರೀ ಶಂಕರಾಚಾರ್ಯರಿಗೆ ಪೂಜೆ ಸಲ್ಲಿಸಿದರು ನಂತರ ಸಾಮೂಹಿಕವಾಗಿ ಶಂಕರ ಅಷ್ಟೋತ್ತರವನ್ನು ಪಠಿಸಲಾಯಿತು.

ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಮಹಿಳಾವೇದಿಕೆಯ ಸದಸ್ಯರು ಪ್ರಾರ್ಥನೆ ಯನ್ನು ಮಾಡಿದರು. ಶ್ರೀಯುತ ವಾಗೀಶ ಶಾಸ್ತ್ರಿಗಳು ಶ್ರೀ ಶಂಕರ ಭಗವತ್ಪಾದರ ಜೀವನದ ವೈಶಿಷ್ಟ್ಯಗಳು, ಅವರ ಬಾಲ್ಯ, ಸನ್ಯಾಸಿಗಳಾದ ಬಗೆ ಹಾಗೂ ಅವರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದ ಬಗ್ಗೆ ವಿವರಿಸಿದರು. ಬಳಿಕ ಬಾಲಗಣಪತಿ ದೇವಸ್ಥಾನದ ಅರ್ಚಕರಾದ ಶ್ರೀ ಜಗಧಾಭಿರಾಮ ಸ್ವಾಮಿಯವರು ಆಚಾರ್ಯರು ಪ್ರತಿಪಾದಿಸಿದ ಅದ್ವೈತ ತತ್ವಗಳ ಪ್ರಸ್ತುತತೆಯ ಬಗ್ಗೆ ಮಾತನಾಡಿದರು

ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ ನಿರ್ದೇಶಕರಾದ ಶ್ರೀ ಎಲ್ಲೂರು ಸುಬ್ಬರಾವ್, ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದ ಮೊಕ್ತೇಸರ ಶ್ರೀ ಬಿ. ಜಯರಾಮ ರಾವ್, ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿಯ ಗೌರವಾಧ್ಯಕ್ಷರಾದ ಪಿ.ಬಿ. ವಾಸುದೇವರಾವ್ ಇವರು ಉಪಸ್ಥಿತರಿದ್ದರು. ಶ್ರೀಮತಿ ಸೀತಾದೇವಿ ಭಾಸ್ಕರ ರಾವ್ ಧನ್ಯವಾದವನ್ನಿತ್ತರು. ಅರುಣ್ ಕುಮಾರ್ ಮುಂಡ್ಕೂರು ಇವರು ಕಾರ್ಯಕ್ರಮ ನಿರ್ವಹಿಸಿದರು. ಬಳಿಕ ಅನ್ನ ಸಂತರ್ಪಣೆ ಹಾಗೂ ಪ್ರಸಾದ ವಿತರಣೆ ನಡೆಯಿತು

ವರದಿ : **ಶ್ರೀಮತಿ ಸೀತಾದೇವಿ ಭಾಸ್ಕರ ರಾವ್**

## ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ಶಂಕರ ಜಯಂತಿ

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.21.05.2016 ರಂದು 'ಶಂಕರ ಜಯಂತಿ'ಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ವಿವಿಧ ಪಾರಾಯಣಗಳು ನಡೆದು ಶ್ರೀ ದುರ್ಗಾನಮಸ್ಕಾರ ಪೂಜೆಯನ್ನು ನೆರವೇರಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವರವರು ಶಂಕರ ಭಗವತ್ಪಾದರ ಸಾಧನೆ, ಅದ್ವೈತ ಮತ, ಅವರ ಜೀವನ ಚರಿತ್ರೆಯ ಕುರಿತು ಧಾರ್ಮಿಕ ಉಪನ್ಯಾಸ ನೀಡಿದರು. ಶೃಂಗೇರಿ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳಿಂದ ಆಶೀರ್ವಾದ ರೂಪವಾಗಿ ನೀಡಲ್ಪಟ್ಟ ಶಾಲು ಹಾಗೂ ಸ್ಮರಣಿಕೆಗಳನ್ನು ಡಾ. ಹರೀಶ ಜೋಶಿಯವರು ಅಧ್ಯಕ್ಷರಿಗೆ ನೀಡಿ ಪುರಸ್ಕರಿಸಿದರು. ಮಂಗಳಾರತಿ, ಪ್ರಸಾದ ವಿತರಣೆ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ರಘುವೀರ್ ಪೆರ್ಡೂರು ಶ್ರೀಮತಿ ಲತಾ ದಂಪತಿಗಳು ಪೂಜೆಯ ಯಜಮಾನಿಕೆಯನ್ನು ವಹಿಸಿಕೊಂಡಿದ್ದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತರಾವ್‌ರವರು ಸ್ವಾಗತಿಸಿ, ವಂದಿಸಿದರು. ಸುಮಾರು 100ಕ್ಕೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದರು.

ವರದಿ : **ಶ್ರೀ ಶ್ರೀಕಾಂತ ರಾವ್**

## ಕೋಟೆಕಾರಿನಲ್ಲಿ ಶಂಕರ ಜಯಂತಿ

ಶ್ರೀ ಶಂಕರ ಜಯಂತಿಯ ಪ್ರಯುಕ್ತ ಕೋಟೆಕಾರಿನಲ್ಲಿರುವ ಶ್ರೀ ಶೃಂಗೇರಿ ಮಠದ ಆಶ್ರಯದಲ್ಲಿ ತಾ.07-05-2016 ರಿಂದ ತಾ 21-05-2016 ರ ತನಕ ಶ್ರೀ ಶಂಕರ ಜಯಂತಿ ಉತ್ಸವಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಆಚರಿಸಲಾಯಿತು. ತಾ. 22-05-2016 ರಂದು ಇದರ ಸಮಾರೋಪ ಸಮಾರಂಭವನ್ನು ಬಂಟ್ವಾಳ ತಾಲೂಕಿನ ಕನ್ಯಾನ ದಲ್ಲಿರುವ ಭಾರತ ಸೇವಾಶ್ರಮದಲ್ಲಿ ಆಚರಿಸಲಾಯಿತು. ಅಂದು ಸಂಜೆ ನಡೆದ ಸಭಾಕಾರ್ಯಕ್ರಮದಲ್ಲಿ ಕ್ಯಾ.ಗಣೇಶ ಕಾರ್ಣಿಕ್ ವಿಧಾನ ಪರಿಷತ್ ಸದಸ್ಯರು, ಬ್ರಹ್ಮಶ್ರೀ ಹಿರಣ್ಯ ವೆಂಕಟೇಶ ಭಟ್, ಶ್ರೀ ಎಸ್ ಈಶ್ವರ ಭಟ್ ಕಾರ್ಯದರ್ಶಿ ಭಾರತ ಸೇವಾಶ್ರಮ, ಶ್ರೀ ಕೆ ಮೋಹನ ರಾವ್ ನಿವೃತ್ತ ತಹಶೀಲ್ದಾರರು ಇವರುಗಳು ಉಪಸ್ಥಿತರಿದ್ದರು. ಶ್ರೀ ಬೊಳ್ಳಾವ ಸತ್ಯಶಂಕರ ರಾವ್ ಧರ್ಮಾಧಿಕಾರಿಗಳು ಕೋಟೆಕಾರು ಮಠ, ಶ್ರೀ ಎಂ. ಆರ್ ವಾಸುದೇವ ಅಧ್ಯಕ್ಷರು ಶ್ರೀ ಶಂಕರ ಪ್ರತಿಷ್ಠಾನ ಇವರು ಕಾರ್ಯಕ್ರಮದ ರೂವಾರಿಗಳಾಗಿದ್ದರು

## ಮಾರ್ಪಳ್ಳಿ ಆರ್ ಮಂಜುನಾಥ್ ಇವರಿಗೆ "ಸಮಾಜ ಸೇವಾರತ್ನ" ಪ್ರಶಸ್ತಿ

ಸಾಹಿತ್ಯದಲ್ಲಿನ ಸೇವೆ ಮತ್ತು ಆಹಾರ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಸಾರ್ವಜನಿಕರಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ, ಶ್ರೀ ಮಾರ್ಪಳ್ಳಿ ಆರ್ ಮಂಜುನಾಥ್ ಇವರಿಗೆ ಸುವರ್ಣಕರ್ನಾಟಕ ಸಂರಕ್ಷಣಾ ಸೇನೆ (ರಿ) ಬೆಂಗಳೂರು ಇವರು ದಿ: 06-03-2016ರಂದು ಬೆಂಗಳೂರಿನ 'ಸರ್ ಪುಟ್ಟಣ್ಣಚೆಟ್ಟಿ ಪುರಭವನ' (ಟೌನ್ ಹಾಲ್) ಜೆ.ಸಿ. ರಸ್ತೆ ಬೆಂಗಳೂರಿನಲ್ಲಿ "ಸಮಾಜ ಸೇವಾರತ್ನ" ಪ್ರಶಸ್ತಿ ನೀಡಿ ಗೌರವಿಸಿದರು.

**-ಶ್ರೀಮತಿ ಮಂಜುಳಾ**

## ಮೂಡುಬಿದಿರೆಯಲ್ಲಿ ಶಂಕರ ಜಯಂತಿ

ಮೂಡುಬಿದಿರೆ ಶ್ರೀ ಆದಿ ಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತಿನ ವತಿಯಿಂದ 2016 ಮೇ 15ರಂದು ಶ್ರೀ ಶಂಕರ ಜಯಂತಿ ಕಾರ್ಯಕ್ರಮ ಅಲಂಗಾರು ಶ್ರೀ ಬೊಕ್ಕಸ ಚಂದ್ರಶೇಖರರಾಯರ ಮಾತೃಕೃಪಾದಲ್ಲಿ ನಡೆಯಿತು. ಬೆಳಗ್ಗಿನ ಉಪಹಾರದ ನಂತರ ಪಾವಂಜೆ ಶ್ರೀ ಅಶ್ವತ್ಥ ಭಟ್‌ರವರ ಪೌರೋಹಿತ್ಯದಲ್ಲಿ ರುದ್ರಾಭಿಷೇಕ, ರುದ್ರ ಪಾರಾಯಣ, ಸಾಮೂಹಿಕ ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಪಾರಾಯಣ, ಮಹಾಪೂಜೆ ನಡೆಯಿತು. ಶ್ರೀ ದೇವರ ಪ್ರಸಾದ ವಿತರಣೆಯ ನಂತರ ಸಮಾಜದ ಮಕ್ಕಳಿಗೆ ನಡೆದ ಶ್ರೀ ಶಿವನಾಮಾವಲ್ಯಕಷ್ಟಕಮ್ ಸ್ಪರ್ಧೆಯಲ್ಲಿ ಕು। ಭೂಮಿಕಾ ಪ್ರಥಮ, ಚಿ। ಗಗನ್ ದ್ವಿತೀಯ ಸ್ಥಾನ ಪಡೆದರು. ಮೀನಾಕ್ಷೀ ಸ್ತೋತ್ರ ಕಂಠಪಾಠ ಸ್ಪರ್ಧೆಯಲ್ಲಿ ಕು। ಮೇಘನಾ ಪ್ರಥಮ, ಚಿ। ಆದರ್ಶ ದ್ವಿತೀಯ, ಚಿ। ರಾಹುಲ್ ತೃತೀಯ ಸ್ಥಾನ ಪಡೆದರು. ತೀರ್ಪುಗಾರರಾಗಿ ಶ್ರೀಮತಿ ರಮ್ಯ ಮುಂಡ್ಕೂರು, ಶ್ರೀ ಕೃಷ್ಣ ಶರ್ಮ ಅನಾರು ಸಹಕರಿಸಿದ್ದರು. ಪರಿಷತ್ತಿನ ಅಧ್ಯಕ್ಷರೂ, ಕರ್ನಾಟಕ ಬ್ಯಾಂಕಿನ ಮಹಾ ಪ್ರಬಂಧಕರೂ ಆದ ಶ್ರೀ ಬಿ.ಚಂದ್ರಶೇಖರ ರಾಯರು ದೀಪ ಪ್ರಜ್ವಲಿಸುವ ಮೂಲಕ ಸಭಾ ಕಾರ್ಯಕ್ರಮ ಪ್ರಾರಂಭಗೊಂಡಿತು. ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭೆ, ಹಾಗೂ ಉಡುಪಿ ಸ್ಥಾನಿಕ ಸಭೆಯ ಮಾಜಿ ಅಧ್ಯಕ್ಷರೂ, ಕೋರ್ಪೊರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಂ. ಶ್ರೀ ಸಿ.ಎಸ್. ರಾವ್‌ರವರು ಶ್ರೀ ಶಂಕರಾಚಾರ್ಯರ ಅದ್ವೈತ ತತ್ವ, ಜೀವನ ಚರಿತ್ರೆಯನ್ನು ಸೊಗಸಾಗಿ ಸಭೆಯ ಮುಂದೆ ಮಂಡಿಸಿದರು.

ಸಂಮಾನ: ಸುಮಾರು 26 ವರ್ಷಗಳ ಹಿಂದೆ ಈ ಮೂಡುಬಿದಿರೆ ಸಂಘದ ಸ್ಥಾಪನೆಗೆ ಕಾರಣಕರ್ತರಾದ, ಶಿಕ್ಷಣದ ವಿವಿಧ ವಿಷಯಗಳಲ್ಲಿ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಹೆಸರುವಾಸಿಯಾಗಿರುವ, 2015-16 ನೇ ಸಾಲಿನ ದ.ಕ. ಜಿಲ್ಲಾ ಮಟ್ಟದಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಶ್ರೀ ರಾಯೀ ರಾಜಕುಮಾರರನ್ನು ಪರಿಷತ್ತಿನ ಅಧ್ಯಕ್ಷ ಶ್ರೀ ಬಿ.ಚಂದ್ರಶೇಖರ ರಾವ್, ಗೌರವಾಧ್ಯಕ್ಷ ಶ್ರೀ ಬಿ.ಕೃಷ್ಣ ರಾವ್, ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ ಶ್ರೀ ಎಂ.ಜಗದೀಶ ರಾವ್‌ರವರು ಶಾಲು ಹೊದೆಸಿ, ಹಾರ ಹಾಕಿ, ಸನ್ಮಾನ ಪತ್ರ, ಸ್ಮರಣಿಕೆ, ಫಲವಸ್ತು ನೀಡಿ ಸಂಮಾನಿಸಿದರು. ಪರಿಷತ್ತಿನ ನಿರ್ದೇಶಕಿ ಶ್ರೀಮತಿ ಮಲ್ಲಿಕಾ ರಾವ್‌ರವರು ಸನ್ಮಾನ ಪತ್ರ ವಾಚಿಸಿದರು. ಪರಿಷತ್ತಿನ ಮಹಾ ಪೋಷಕರಾಗಿ ಸೇರ್ಪಡೆಗೊಂಡ ಅಲಂಗಾರು ಶ್ರೀ ಬಿ. ವಿಷ್ಣುಮೂರ್ತಿ ರಾಯರನ್ನು, ಪ್ರವಚನಕಾರರಾಗಿ ಆಗಮಿಸಿದ ಶ್ರೀ ಸಿ.ಎಸ್. ರಾವ್‌ರವರನ್ನು ಶಾಲು ಹೊದೆಸಿ ಸನ್ಮಾನಿಸಿ, ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ, ಸಭೆಯ ಅಧ್ಯಕ್ಷ ಸ್ಥಾನದಿಂದ ಶ್ರೀ ಚಂದ್ರಶೇಖರರಾವ್‌ರವರು ಮಾತನಾಡಿ ಊರ, ಪರಊರ ಸಮಾಜ ಬಾಂಧವರು ಪರಿಷತ್ತಿನ ಪ್ರಗತಿಗಾಗಿ ನಮ್ಮೊಂದಿಗೆ ಸಹಕರಿಸಬೇಕೆಂದು ವಿನಂತಿಸಿಕೊಂಡರು. 2015 ದಶಂಬರ್ 6 ರಿಂದ 2016 ಮೇ 01 ರವರೆಗೆ ಶ್ರೀ ಶೃಂಗೇರಿ ಗುರುಗಳ ಅಪ್ಪಣೆಯಂತೆ ನಡೆದ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಜಪನಾಮ ಪಾರಾಯಣದ ಜಪಯಜ್ಞದಲ್ಲಿ ಭಾಗವಹಿಸಿದ ಸಮಾಜದ ಮಹನೀಯರಿಗೆ ಹಾಗೂ ಮಹಿಳೆಯರಿಗೆ ಶ್ರೀ ಶೃಂಗೇರಿ ಗುರುಗಳು ಹರಸಿ ನೀಡಿದ ಪ್ರಮಾಣ ಪತ್ರವನ್ನು ಪರಿಷತ್ತಿನ ಕಾರ್ಯದರ್ಶಿ ಶ್ರೀ ಜಗದೀಶ ರಾವ್‌ರವರು ನೀಡಿದರು. ಪರಿಷತ್ತಿನ ಗೌರವಾಧ್ಯಕ್ಷ ಶ್ರೀ ಕೃಷ್ಣರಾಜರಾವ್‌ರವರು ಮಾತನಾಡಿ ಪರಿಷತ್ತಿನ ಕಾರ್ಯಗಳಿಗೆ ಸದಸ್ಯರು ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು. ಪಡುಬಿದ್ರಿ ಸ್ಥಾನಿಕ ಸಭಾದ ಗೌರವಾಧ್ಯಕ್ಷ ಶ್ರೀ ಪಿ.ಬಿ.ವಾಸುದೇವ ರಾವ್, ಅಧ್ಯಕ್ಷ ಶ್ರೀ ದಿವಾಕರ್ ರಾವ್ ಹಾಗೂ ಇತರ ಸದಸ್ಯರು ಆಗಮಿಸಿ ಕಾರ್ಯಕಲಾಪದಲ್ಲಿ ಭಾಗವಹಿಸಿದ್ದರು. ಕು। ಮೇಘನಾ, ಕು। ಶುಭಾಂಜನಾ ಪ್ರಾರ್ಥಿಸಿದರು, ಕಾರ್ಯದರ್ಶಿ ಶ್ರೀ ಎಂ.ಜಗದೀಶ ರಾವ್ ಸ್ವಾಗತಿಸಿದರು, ಪರಿಷತ್ತಿನ ನಿರ್ದೇಶಕ ಶ್ರೀ ಬಿ. ಜಯರಾಮ್ ರಾವ್ ಕಾರ್ಯಕ್ರಮ ನಿರ್ವಹಿಸಿದರು, ಆಳ್ವಾಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಬಿ.ಕೆ.ವಸಂತರಾಜ ರಾವ್ ಧನ್ಯವಾದ ಸಲ್ಲಿಸಿದರು, ನೂರಾರು ಸಮಾಜ ಬಾಂಧವರು ಪ್ರಸಾದ ಭೋಜನ ಸ್ವೀಕರಿಸುವುದರೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ವರದಿ : **ಶ್ರೀ ಎಂ.ಜಗದೀಶ ರಾವ್**

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಶುಭಾಶಯಗಳೊಂದಿಗೆ
ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

5ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



2015-2016ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶ್ರೀಮತಿ ಗೀತಾ ಹಾಗೂ ಶ್ರೀ ಜಯಪ್ರಕಾಶ ಕಾವಳಕಟ್ಟೆ ಇವರ ಪುತ್ರಿ ಎಸ್. ವಿ. ಎಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ **ಕುಮಾರಿ ಪ್ರತೀಕ್ಷಾ ಕಾವಲಕಟ್ಟೆ** ಇವಳು 96%(600/625) ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ



2015-2016ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕುಂದಾಪುರ ಹೆಬ್ಬಾರ್ ಕಂಪೌಂಡ್‌ನ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ಪ್ರದೀಪ್ ಸಿ ಶ್ಯಾನುಭಾಗ್ ಇವರ ಪುತ್ರಿ ವಿ.ಕೆ.ಆರ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಕುಮಾರಿ **ವೈಷ್ಣವೀ ಪಿ ಶ್ಯಾನುಭಾಗ್** ಇವಳು 611/625 ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ.



2015-2016ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಎಲ್ಲೂರಿನ ಶ್ರೀಮತಿ ಸೌಮ್ಯಲತಾ ಹಾಗೂ ಶ್ರೀ ರವಿರಾಜ್ ಇವರ ಪುತ್ರಿ ಸಂತ ಫ್ರಾನ್ಸಿಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ **ಕುಮಾರಿ ಶರಣ್ಯ** ಇವಳು 94.08% (588/625) ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ



2015ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮಂಗಳೂರಿನ ಕುಮಾರಿ **ಪ್ರೇರಣಾ ರಾವ್** (598/625) 96% ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಸುಬ್ರಹ್ಮಣ್ಯ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಮತ್ತು ಶ್ರೀಮತಿ ಭಾರತಿ ರಾವ್ ರವರ ಸುಪುತ್ರಿ ಹಾಗೂ ಕೆನರಾ ಗರ್ಲ್ಸ್ ಹೈಸ್ಕೂಲಿನ ವಿದ್ಯಾರ್ಥಿನಿಯಾಗಿದ್ದಾಳೆ.



2015-2016ನೇ ಸಾಲಿನ ಐ.ಸಿ.ಎಸ್.ಇ ಬೋರ್ಡಿನ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ನಂದಿನಿ ಲೇ-ಔಟ್ ರಾಜೀವ್ ನಗರ ಬೆಂಗಳೂರಿನ ಡಾ। ಕಣ್ಮಣಿ ನಂದಳಿಕೆ ಹಾಗೂ ಶ್ರೀ ರಾಜಶೇಖರ್ ರಾವ್ ಎರ್ಮಾಳು ಇವರ ಪುತ್ರಿ ಬೆಂಗಳೂರಿನ ಪ್ರೆಸಿಡೆನ್ಸಿ ಶಾಲೆಯ ವಿದ್ಯಾರ್ಥಿನಿ **ಕುಮಾರಿ ನಿಯತೀ ಆರ್.** ಇವಳು 96.5% (579/600) ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ



2015-2016ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕುಂದಾಪುರ ತಾಲೂಕಿನ ಮರೂರಿನ ಶ್ರೀಮತಿ ಉಷಾ ಹಾಗೂ ಶ್ರೀ ಶ್ರೀಧರ ಹೆಬ್ಬಾರ್ ಇವರ ಪುತ್ರಿ ಹಾಗೂ ಹೆಬ್ರಿ ಅಮೃತ ಭಾರತೀ ಶಾಲೆಯ ವಿದ್ಯಾರ್ಥಿನಿ **ಶ್ರೀ ಲಕ್ಷ್ಮೀ** ಇವಳು ಸಂಸ್ಕೃತ 125, ಇಂಗ್ಲೀಷ 99 ಕನ್ನಡ 99 ಗಣಿತ 98 ವಿಜ್ಞಾನ 100 ಸಮಾಜ 98 ಹೀಗೆ 99.04% ಅಂಕ ಗಳಿಸಿ ಕಾರ್ಕಳ ತಾಲೂಕಿಗೆ ಪ್ರಥಮ, ಉಡುಪಿ ಜಿಲ್ಲೆಗೆ ತೃತೀಯ, ರಾಜ್ಯಕ್ಕೆ ಏಳನೇ ಸ್ಥಾನ ಪಡೆದು ಉನ್ನತಾಂಕದಲ್ಲಿ ಉತ್ತೀರ್ಣಳಾಗಿದ್ದಾಳೆ.



2015-2016ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶ್ರೀಮತಿ ಕಾಂತಿ ಹಾಗೂ ಶ್ರೀ ಸಂಪತ್ ಎಂ ರಾವ್ ಇವರ ಪುತ್ರ **ಅನುದೀಪ್** ಇವನು 613/625 ಅಂಕ ಗಳಿಸಿ ಉತ್ತೀರ್ಣನಾಗಿದ್ದಾನೆ

## ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞದ ಸಮರ್ಪಣಾ ಸಮಾರಂಭ

ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನದಲ್ಲಿ ರಾಜ್ಯಾದ್ಯಾಂತ ನಡೆದ ಪಾರಾಯಣ ಸಮರ್ಪಣಾ ಸಮಾರಂಭವು ತಾ.29-05-2016ರಂದು ಶೃಂಗೇರಿಯಲ್ಲಿ ಯತಿದ್ವಯರಾದ ಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳರವರು ಹಾಗೂ ಅವರ ಕರಕಮಲ ಸಂಜಾತ ಶ್ರೀಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ದಿವ್ಯ ಉಪಸ್ಥಿತಿಯಲ್ಲಿ ಪಾರಾಯಣಕರ್ತರು ಹಾಗೂ ಕಿಕ್ಕಿರಿದ ಭಕ್ತಾಧಿಗಳಿಂದ ವೈಭವೋಪೇತವಾಗಿ. ನೆರವೇರಿತು. ಸಂಜೆ 5 ಗಂಟೆಯಿಂದ ನಡೆದ ಸಭೆಗೆ ಉಭಯ ಯತಿವರ್ಯರನ್ನು ಅಲಂಕೃತವಾದ 'ಚಂದ್ರಶೇಖರ ಭಾರತೀ ಸಭಾಂಗಣದ ವೇದಿಕೆಗೆ ಸಕಲ ಗೌರವಗಳೊಂದಿಗೆ ಆಹ್ವಾನಿಸಲಾಯಿತು. ಗುರುಸೇವಾಧುರೀಣ, ಡಾ.ವಿ.ಆರ್ ಗೌರೀಶಂಕರ್,ಆಡಳಿತಾಧಿಕಾರಿಗಳು, ಶ್ರೀ ಶಾರದಾಪೀಠ, ಶೃಂಗೇರಿ ಹಾಗೂ ಈ ಅಭಿಯಾನದಲ್ಲಿ ಮುಖ್ಯ ಪಾತ್ರ ವಹಿಸಿದ ಶ್ರೀ ಉಮೇಶ ಹರಿಹರ ಮತ್ತು ಶ್ರೀ ಶಿಕಾರಿಪುರ ಕೃಷ್ಣಮೂರ್ತಿಯವರ ನೇತೃತ್ವದಲ್ಲಿ ಸಭಾಕಾರ್ಯಕ್ರಮಗಳು ಪ್ರಾರಂಭವಾಗಿ, ಉಭಯ ಶ್ರೀಗಳು ಅನುಗ್ರಹ ಭಾಷಣ ಮಾಡುತ್ತಾ ಅಷ್ಟೋತ್ತರಗಳಲ್ಲಿ ಬರುವ ಕೆಲವು ನಾಮಾವಳಿಗಳನ್ನು ವಿಶ್ಲೇಷಿಸಿದರು. ಪುರಾಣದ ಕೆಲವು ಸಂದರ್ಭಗಳನ್ನು ಉಲ್ಲೇಖಿಸಿ, ನಮ್ಮ ಸಂಸ್ಕೃತಿಯ ಉಳಿವಿಗಾಗಿ ಜಗದ್ಗುರು ಶಂಕರಾಚಾರ್ಯರ ಪರಿಶ್ರಮ, ಇದರಿಂದ ಆ ಕಾಲದಲ್ಲಿ ಸಮಾಜದ ಮೇಲೆ ಉಂಟಾದ ಸತ್ಪರಿಣಾಮ ಇಂದಿಗೂ ನಮ್ಮೆಲ್ಲರಿಗೆ ಜೀವನಾಧಾರವಾಗಿದೆ. ಆದ್ದರಿಂದ ''ಈ ಪಾರಾಯಣ ಯಜ್ಞ ಇಲ್ಲಿಗೆ ಮುಗಿದಿಲ್ಲ; ಇದು ಪ್ರಾರಂಭ, ಪ್ರತೀ ಮನೆಯಲ್ಲೂ ಈ ಪಾರಾಯಣ ಯಜ್ಞ ಪ್ರತಿದಿನ ಮುಂದುವರಿಯಬೇಕು'' ಎಂದು ಅಪ್ಪಣೆ ಕೊಡಿಸಿದರು.

ಅಂದು ರಾಜ್ಯಾದ್ಯಂತದಿಂದ ಪ್ರತೀ ಜಿಲ್ಲೆಯಿಂದಲೂ ಆಗಮಿಸಿದ್ದ ಸುಮಾರು 6000ದಷ್ಟು ಜನರು ಭಾಗವಹಿಸಿ, ಪ್ರಸಾದ ಸ್ವೀಕರಿಸಿದರು. ಈ ಪಾರಾಯಣ ಯಜ್ಞದ ಗುರಿ 2 ಲಕ್ಷ ಇದ್ದರೂ ಮುಕ್ತಾಯದಲ್ಲಿ 5 ಲಕ್ಷಕ್ಕಿಂತಲೂ ಹೆಚ್ಚು ಪಾರಾಯಣ ಮಾಡಿರುವ ಬಗ್ಗೆ ಶ್ರೀ ಗುರುಗಳಿಗೆ ಮಾಹಿತಿ ನೀಡಿ ಪಾರಾಯಣ ಯಜ್ಞದ ಸಮರ್ಪಣೆಯನ್ನು ಮಾಡಲಾಯಿತು.

ಈ ಅಭಿಯಾನದಲ್ಲಿ ಪಾಲ್ಗೊಂಡ ಎಲ್ಲಾ ಜಿಲ್ಲಾ ಸಂಚಾಲಕರನ್ನು ಗುರುವರೇಣ್ಯರ ಆಶೀರ್ವಾದದೊಂದಿಗೆ ಶಾಲು ಹೊದಿಸಿ ಗೌರವಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕರಾದ ಶ್ರೀ ಕರುಣ್ ರಾವ್ ಬೆಳ್ಳೆ ಹಾಗೂ ಉಡುಪಿ ಜಿಲ್ಲಾ ಸಂಚಾಲಕರಾದ ಶ್ರೀ ಪ್ರಫುಲ್ಲಚಂದ್ರ ರಾಯರು ಈ ಗೌರವಕ್ಕೆ ಭಾಜನರಾದರು. ಉಭಯ ಜಿಲ್ಲೆಗಳಿಂದ ಸುಮಾರು 200 ಮಂದಿ ಪಾರಾಯಣಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವರದಿ : ಜಿ.ಕೆ ಕೋಲ್ವೆ, ಉಡುಪಿ.

### ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 14-06-2016 | ಮಿಥುನ ಸಂಕ್ರಮಣ |
| 16-06-2016 | ಸರ್ವೈಕಾದಶಿ |
| 20-06-2016 | ಹುಣ್ಣಿಮೆ |
| | ದಕ್ಷಿಣಾಯನ ಆರಂಭ |
| 23-06-2016 | ಸಂಕಷ್ಟಹರ ಚತುರ್ಥಿ |
| 30-06-2016 | ಸರ್ವೈಕಾದಶಿ |
| 04-07-2016 | ಅಮಾವಾಸ್ಯೆ |
| 05-07-2016 | ಆಷಾಢ ಮಾಸಾರಂಭ |
| | ಶುಕ್ರೋದಯ |
| 15-07-2016 | ಸರ್ವೈಕಾದಶಿ |
| 16-07-2016 | ಕರ್ಕಾಟಕ ಸಂಕ್ರಮಣ |

### ಶ್ರೀಶಾರದಾ ದೇವಸ್ಥಾನದ ತಿಂಗಳ ಕಾರ್ಯಕ್ರಮಗಳು

**ಪ್ರತಿ ಮಂಗಳವಾರ ಸೌಂದರ್ಯಲಹರೀ ಪಾರಾಯಣ ಸಂಜೆ 5-00ಕ್ಕೆ**
**ಪ್ರತಿ ಶುಕ್ರವಾರ ಲಲಿತಾ ಸಹಸ್ರನಾಮ ಮತ್ತು ಭಜನೆ ಸಂಜೆ 5-00ಕ್ಕೆ**
**ಪ್ರತಿ ಆದಿತ್ಯವಾರ ಪಾರಾಯಣ ಸ್ವಾಧ್ಯಾಯ ಸಮಿತಿಯಿಂದ 4-30ಕ್ಕೆ**
**ತಾ.23-06-2016 ಸಂಕಷ್ಟಹರ ಚತುರ್ಥಿ ಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ 10ಕ್ಕೆ**
**ತಾ.20-06-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ ಸಂಜೆ 5ಕ್ಕೆ**
**ತಾ.25-06-2016 ಮತ್ತು ತಾ.09-07-2016 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 10ಕ್ಕೆ**

## ಎಪ್ಪತ್ತನೆ ವರ್ಷದ ಸಂಭ್ರಮ

ಮಣಿಪಾಲ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲರಾದ ದಿ। ಹೆರ್ಗ ದಾಸಪ್ಪಯ್ಯ ಹಾಗೂ ಸೀತಮ್ಮನವರ ಪುತ್ರ ಶ್ರೀ ಹೆರ್ಗ ನಿರಂಜನರಾಯರು ತಮ್ಮ ಪತ್ನಿ ಶ್ರೀಮತಿ ಶ್ರೀಮತಿ ರಾವ್ ರೊಂದಿಗೆ ಹೆರ್ಗ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ 70ನೇ ಹುಟ್ಟುಹಬ್ಬದ ಸಂಭ್ರಮವನ್ನು ಭೀಮರಥೀ ಶಾಂತಿಯೊಂದಿಗೆ ತಾ.10-05-2016ರಂದು ವಿಜೃಂಭಣೆಯಿಂದ ಬಂಧು ಬಾಂಧವರೊಡಗೂಡಿ ಆಚರಿಸಿದರು. ಇವರು ನಮ್ಮ ಸಂಘದ ನಿರ್ದೇಶಕರು ಹಾಗೂ ಈ ಹಿಂದೆ ಸಂಘದ ಕಾರ್ಯದರ್ಶಿಯೂ ಆಗಿದ್ದರು. ಈಗ ಸಾಂಸ್ಕೃತಿಕ ಹಾಗೂ ಕಲಾ ವೇದಿಕೆಯ ಸಂಚಾಲಕರಾಗಿದ್ದಾರೆ.

## ವಿವಾಹದ ಬೆಳ್ಳಿ ಹಬ್ಬದ ಆಚರಣೆ

ಉಡುಪಿಯ ದಿ.ಭುಜಂಗರಾವ್ ಹಾಗೂ ಶಾಂತಮ್ಮ ದಂಪತಿಗಳ ದ್ವಿತೀಯ ಪುತ್ರ ಬಿ. ಪ್ರಕಾಶ ರಾವ್ ಹಾಗೂ ಅವರ ಪತ್ನಿ ಶ್ರೀಮತಿ ಲತಾ ಪ್ರಕಾಶ ರಾವ್ ಇವರು ತಮ್ಮ ವೈವಾಹಿಕ ಜೀವನದ ಬೆಳ್ಳಿ ಹಬ್ಬದ ಆಚರಣೆಯನ್ನು ತಾ. 29-05-2016 ರಂದು ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ವೈಭವದಿಂದ ಆಚರಿಸಿದರು. ಆ ಪ್ರಯುಕ್ತ ಅವರ ಪುತ್ರಿ ಕು. ದಿಶಾ ರವರ ನೇತೃತ್ವದಲ್ಲಿ ವಿದ್ಯಾರ್ಥಿಗಳಿಂದ ಮನೋರಂಜನಾ ಕಾರ್ಯಕ್ರಮವಿತ್ತು

## ವಿವಾಹದ ಬೆಳ್ಳಿ ಹಬ್ಬದ ಆಚರಣೆ

ಮೂಡುಬೆಳ್ಳೆ ದಿ। ಬಾಬುರಾಯರ ಪುತ್ರ, ಕುಂತಳ ನಗರ ದ ಶ್ರೀ ಮೋಹನ ರಾವ್ ಹಾಗೂ ಶ್ರೀಮತಿ ನಳಿನಾಕ್ಷಿ ದಂಪತಿಗಳು ತಮ್ಮ ವಿವಾಹದ 25ನೇ ವರ್ಷಾಚರಣೆಯನ್ನು ತಾ.30-05-2016ರಂದು ತಮ್ಮ ಸ್ವಗೃಹ "ದಿವ್ಯಾ ದೀಪಾ" ದಲ್ಲಿ ಸಂಭ್ರಮದಿಂದ ಆಚರಿಸಿದರು. ಆ ಪ್ರಯುಕ್ತ ಗಣಹೋಮ , ಸತ್ಯನಾರಾಯಣ ಕಥೆ ಹಾಗೂ ರಾತ್ರಿ ದುರ್ಗಾನಮಸ್ಕಾರ ಪೂಜೆಗಳನ್ನು ಮನೆಯಲ್ಲಿ ನೆರವೇರಿಸಿದರು

## ಪೆರ್ಡೂರು ರೋಟರಿ ಕ್ಲಬ್ಬಿಗೆ ಪ್ರಶಸ್ತಿ

ಪೆರ್ಡೂರಿನ ಶ್ರೀ ಪ್ರಭಾಕರ ಭಂಡಿಯವರು ಕಾರ್ಯದರ್ಶಿಯಾಗಿರುವ ಪೆರ್ಡೂರಿನ ರೋಟರಿ ಕ್ಲಬ್ ಜಿಲ್ಲಾಮಟ್ಟದ ಅತ್ಯುತ್ತಮ ಕ್ಲಬ್ ಎಂಬ ಪ್ರಶಸ್ತಿ ಪಡೆದಿರುತ್ತದೆ. ಇತ್ತೀಚೆಗೆ ಕೋಟೇಶ್ವರದ ಸಹನಾ ಕನ್ವೆನ್ಶನ್ ಸೆಂಟರಿನಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಪ್ರಭಾಕರ ಭಂಡಿ ಹಾಗೂ ರವೀಂದ್ರ ಭಂಡಿಯವರು ರೊಟರೀ ಗವರ್ನರ್ ಡಾ। ಭರತೇಶ್ ಅಧಿರಾಜ್ ರವರಿಂದ ಕ್ಲಬ್ಬಿನ ಅಧ್ಯಕ್ಷ ಶ್ರೀ ಸುರೇಶ ಹೆಗ್ಡೆಯವರೊಂದಿಗೆ ಪ್ರಶಸ್ತಿಯನ್ನು ಸ್ವೀಕರಿಸಿದರು.

### ಮಾಂಗಲ್ಯಂ ತಂತುನಾನೇನ ....

ಮೈಸೂರಿನ ಶ್ರೀಮತಿ ಸೀತಾರತ್ನ ಹಾಗೂ ಶ್ರೀ ಕೆ. ಶಿವಶಂಕರರಾವ್ ದಂಪತಿಗಳ ಪುತ್ರ **ಅಭಿಷೇಕ್** ಹಾಗೂ ಮೈಸೂರು ಶ್ರೀಮತಿ ಪದ್ಮಜ ಮತ್ತು ಶ್ರೀ ಜಿ.ವಿ ಫಣಿರಾಜ್ ಇವರ ಪುತ್ರಿ **ಶೃತಿ** ಇವರ ವಿವಾಹವು ತಾ 16-05-2016 ರಂದು ಮೈಸೂರಿನ ಶ್ರೀ ಮಂಜುನಾಥಸ್ವಾಮಿ ಕಲ್ಯಾಣಮಂಟಪದಲ್ಲಿ ನೆರವೇರಿತು.

**** ****

ಉಡುಪಿ ಕುತ್ಪಾಡಿಯ ಶ್ರೀಮತಿ ನಾಗವಲ್ಲಿ ಹಾಗೂ ಶ್ರೀ ಸುರೇಶರಾವ್ ದಂಪತಿಗಳ ಪುತ್ರ **ಆದಿತ್ಯ** ಹಾಗೂ ಹೊಸ್ಕೋಟೆ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ವೆಂಕಟೇಶ ರಾವ್ ಇವರ ಪುತ್ರಿ **ಮಧುರಾ** ಇವರ ವಿವಾಹವು ತಾ 09-05-2016ರಂದು ಕುಂದಾಪುರ ಹಂಗ್ಳೂರು ಶ್ರೀ ಅನಂತ ಪದ್ಮನಾಭ ಸಭಾಭವನದಲ್ಲಿ ನೆರವೇರಿತು.

## ಗೃಹ ಪ್ರವೇಶ

ಪ್ರಸಕ್ತ ಮುಂಬಯಿಯಲ್ಲಿ ವಾಸವಾಗಿರುವ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ಶೈಲೇಶ್ ರಾವ್ ಇವರು ಮೂಡಬಿದ್ರೆಯ ಮಾಸ್ತಿಕಟ್ಟೆಯಲ್ಲಿ ನಿರ್ಮಿಸಿದ ಗೃಹ ಶ್ರೀಕೃಷ್ಣ ಸೌಭಾಗ್ಯಂ ಇದರ ಪ್ರವೇಶೋತ್ಸವವನ್ನು ತಾ08-05-2016 ರಂದು ನೆರವೇರಿಸಿದರು.

## ಬ್ರಹ್ಮೋಪದೇಶ

**ಚಿ। ಮಯೂರ**


ಉಡುಪಿಯ ಡಾ। ವೈ ಸುದರ್ಶನ ರಾವ್ ಹಾಗೂ ಶ್ರೀಮತಿ ವಿದ್ಯಾ ದಂಪತಿಗಳ ಪುತ್ರ **ಮಯೂರನ** ಬ್ರಹ್ಮೋಪದೇಶವು ತಾ.08-05-2016 ರಂದು ಸಗ್ರಿ ಅನಂತ ಸಭಾಭವನದಲ್ಲಿ ನೆರವೇರಿತು .

## ವಿಳಾಸ ಬದಲಾವಣೆ

ಪಡುಬಿದ್ರೆಯ ಸ್ವಸ್ತಿಕ್ ಪಾರ್ಕ್‌ನಲ್ಲಿ ವಾಸವಾಗಿದ್ದ ಶ್ರೀ ಎಂ.ಕೆ ಜಯಪ್ರಕಾಶ ರಾಯರು ಈ ಕೆಳಗಿನ ವಿಳಾಸಕ್ಕೆ ತಮ್ಮ ವಾಸವನ್ನು ಬದಲಾಯಿಸಿದ್ದಾರೆ. ಶ್ರೀ ಎಂ. ಕೆ ಜಯಪ್ರಕಾಶ್, ಶ್ರೀ ವಿಷ್ಣು ನಿಲಯ, ಮನೆ ನಂಬ್ರ 6-54 ಬಿ (3), ಬ್ರಹ್ಮಸ್ಥಾನದ ಬಳಿ, ಪಡುಬಿದ್ರಿ, ಉಡುಪಿ ಮೊಬೈಲ್ 9945736397, 9663567653.

**ನಿಧನ** ಶ್ರೀ ಬೆಳ್ಳೆ ರಾಜಶೇಖರ ಶರ್ಮಾ

ಮುಂಡ್ಕೂರು ಕಂಗುಳಿ ಮೀನಾಕ್ಷಿ ಧಾಮದಲ್ಲಿ ವಾಸವಾಗಿದ್ದ ಶ್ರೀ ಬೆಳ್ಳೆ ರಾಜಶೇಖರ ಶರ್ಮರು ತಾ.13-05-2016ರಂದು ಸ್ವಗೃಹದಲ್ಲಿ ನಿಧನ ಹೊಂದಿದರು.

## ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಶ್ರೀ ಬಿ.ಆನಂದರಾವ್



ಬೆಳ್ಮಣ್ ಆನಂದರಾಯರು ಮೂಲತಃ ನಂದಳಿಕೆಯವರಾದ ಶ್ರೀ ಬಾಬುರಾವ್ ಹಾಗೂ ಶ್ರೀಮತಿ ಶೇಷಮ್ಮ ಇವರ ಏಳು ಹೆಣ್ಣು ಹಾಗೂ ನಾಲ್ಕು ಗಂಡು ಮಕ್ಕಳಲ್ಲಿ ಮೂರನೇ ಪುತ್ರರು. ತಮ್ಮ ಸಣ್ಣ ವಯಸ್ಸಿನಲ್ಲೇ ಮಹಾರಾಷ್ಟ್ರದ ಲಾತೂರ್ ಗೆ ತೆರಳಿ ಹೋಟೆಲು ಉದ್ಯಮಕ್ಕೆ ಕಾಲಿಟ್ಟ ಶ್ರೀ ಆನಂದ ರಾಯರು ಯಶಸ್ಸಿನ ಒಂದೊಂದೇ ಮೆಟ್ಟಿಲುಗಳನ್ನೇರುತ್ತಾ ಸ್ವಪಯ್ರತ್ನದಿಂದ ಆ ಉದ್ಯಮದಲ್ಲಿ ಯಶಸ್ಸು ಗಳಿಸಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಅನಸೂಯರವರು ಕುಕ್ಕೆಹಳ್ಳಿ ಗುಂಡುರಾವ್ ಹಾಗೂ ಕಾವೇರಿಯಮ್ಮನವರ 11 ಜನ ಮಕ್ಕಳಲ್ಲಿ ಮೊದಲನೆಯ ಪುತ್ರಿ. ಎಲ್ಲರೊಂದಿಗೆ ವಿನಯದಿಂದ ಮಾತನಾಡುವ ಈ ದಂಪತಿಗಳು ಸರಳ ಸ್ವಭಾವದ ಸಜ್ಜನರು. ಊರಿನ ಪ್ರತಿಯೊಂದು ಕಾರ್ಯಕ್ರಮಕ್ಕೂ ಪ್ರೀತಿಯಿಂದ ಹಾಜರಾಗುತ್ತಾರೆ ಹಾಗೂ ಎಲ್ಲರನ್ನೂ ಕರೆದು ಪರಿಚಯಿಸಿಕೊಂಡು ಮಾತನಾಡುತ್ತಾರೆ. ಇವರ ಪ್ರಥಮ ಪುತ್ರ ಡಾ। ಅರುಣ್ ಕುಮಾರ್ ಎಲುಬುಕೀಲು ತಜ್ಞರು. ಲಾತೂರಿನಲ್ಲಿ ಸುಸಜ್ಜಿತವಾದ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ. ದ್ವಿತೀಯ ಪುತ್ರ ಕೃಷ್ಣಾ ರವರು ನ್ಯಾಯವಾದಿಗಳು ಹಾಗೂ ಸ್ವಂತ ಉದ್ಯಮವನ್ನು ನಡೆಸುತ್ತಿದ್ದಾರೆ. ಮೂರನೇ ಪುತ್ರ ರವಿರಾಜ್ ರವರು ಇಂಜಿನಿಯರ್ ಆಗಿದ್ದು ಅವರೂ ಸ್ವಂತ ಉದ್ಯಮವನ್ನು ನಡೆಸುತ್ತಿದ್ದಾರೆ. ಅವಳಿ ಪುತ್ರಿರಲ್ಲೊಬ್ಬರಾದ ಅನುರಾಧ ಮಂಗಳೂರಿನ ಡಾ। ಕಿಶೋರ್ ರವರ ಪತ್ನಿ. ಇವರು ಉತ್ತಮ ನೃತ್ಯಗಾತಿಯಾಗಿದ್ದಾರೆ. ಇನ್ನೋರ್ವಳು ಪುತ್ರಿಯಾದ ಶ್ರೀಮತಿ ಅನ್ನಪೂರ್ಣ ಎಲ್ಲೂರು ಸದಾಶಿವರಾಯರ ಪತ್ನಿ. ಇವರು ಅಮೇರಿಕಾದಲ್ಲಿ ನೆಲೆಸಿದ್ದಾರೆ. ಶ್ರೀ ಶಾರದಾ ಪತ್ರಿಕೆಯನ್ನು ಮೆಚ್ಚಿ ಅಭಿಮಾನದಿಂದ ಅದರ ಮಹಾಪೋಷಕರಾಗಿರುವ ಶ್ರೀ ಬಿ. ಆನಂದ ರಾಯರನ್ನು ನಮ್ಮ ಓದುಗರಿಗೆ ಪರಿಚಯಿಸಲು ನಮಗೆ ಹೆಮ್ಮೆಯಾಗುತ್ತಿದೆ. ಶ್ರೀ ಶಾರದಾ ಪತ್ರಿಕೆಯನ್ನು ಆರಂಭದಿಂದಲೂ ಪ್ರೋತ್ಸಾಹಿಸುತ್ತಿರುವ ಶ್ರೀ ಬಿ ಆನಂದರಾವ್ ದಂಪತಿಗಳಿಗೆ ಶ್ರೀ ಶಾರದಾ ಬಳಗದ ಧನ್ಯವಾದಗಳು.


## ಶ್ರೀಮತಿ ಭಾನುಮತಿ ಮತ್ತು ಶ್ರೀ ಜಯರಾಮ ಶ್ಯಾನುಭೋಗ್



ವಿವಾಹ ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ತಮಗೆ ಹೃತ್ಪೂರ್ವಕ ಶುಭಾಶಯಗಳು

ಶ್ರೀಮತಿ ಲಕ್ಷ್ಮಿ ಮತ್ತು ಶ್ರೀ ವಾಸುದೇವ ರಾವ್, ಕೋಟೇಶ್ವರ.
ಶ್ರೀಮತಿ ನಳಿನಿ ಮತ್ತು ಶ್ರೀ ರವೀಂದ್ರ ದೊಡ್ಮನೆ
ಶ್ರೀಮತಿ ಉಷಾ ಮತ್ತು ಶ್ರೀ ನಾಗೇಶ್ ಹೆಬ್ಬಾರ್, ಹೆಮ್ಮಾಡಿ.
ಶ್ರೀಮತಿ ವಂದನ ಮತ್ತು ಶ್ರೀ ಕೇದಾರನಾಥ, ಧರ್ಮಸ್ಥಳ
ವಿಜಯಲಕ್ಷ್ಮಿ ಶ್ಯಾನುಭೋಗ್, ಹೆಗಡೆ, ಕುಮಟ
ಶ್ರೀಮತಿ ವಿಜಯ್ ಮತ್ತು ಶ್ರೀ ಮಂಜಯ್ಯ ಶ್ಯಾನುಭೋಗ್, ಬೆಂಗಳೂರು
ಶ್ರೀ ದತ್ತಾತ್ರೇಯ ಶ್ಯಾನುಭೋಗ್, ಹೆಗಡೆ
ಶ್ರೇಯಸ್
ವಿನೀತ್, ಶೀತಲ್, ವಾಣಿಶ್ರೀ, ಸುಜಲಾ, ನಿಖಿತಾ, ಶಾಂತಲಾ, ವನಜಾಕ್ಷಿ ರಾವ್ ಮತ್ತು ಮಕ್ಕಳು ಹಾಗೂ ಸೊಸೆಯಂದಿರು, ಕಾರಿಂಜ.

## ಶ್ರೀ ಮೋಹನ್ ರಾವ್ ಬೆಳ್ಳೆ ಮತ್ತು ಶ್ರೀಮತಿ ನಳಿನಾಕ್ಷಿ, ಕುಂತಳನಗರ, ಉಡುಪಿ



ವಿವಾಹದ ರಜತಮಹೋತ್ಸವದ ಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ

ಶ್ರೀಮತಿ ಮತ್ತು ಶ್ರೀ ವೆಂಕಟ್ರಮಣ ರಾವ್, ಮೂಡುಬೆಳ್ಳೆ ಹಾಗೂ ಸಹೋದರ, ಸಹೋದರಿಯರು
ಶ್ರೀಮತಿ ಮತ್ತು ಶ್ರೀ ಭಾಸ್ಕರ್ ರಾವ್ ಚೊಕ್ಕಾಡಿ ಹಾಗೂ ಸಹೋದರ, ಸಹೋದರಿಯರು
ಶ್ರೀಮತಿ ದಿವ್ಯಾ ಹಾಗೂ ಶ್ರೀ ಚಂದ್ರಕಾಂತ
ಕು। ದೀಪಾ

## ದಾಂಪತ್ಯ ಸುವರ್ಣ ಸಂಭ್ರಮ


ಶ್ರೀ ಕಟಪಾಡಿ ವೆಂಕಟರಮಣ ರಾವ್ ಮತ್ತು ಶ್ರೀಮತಿ ಶಾಂತಾ ವಿ.ರಾವ್, ಕುಂಜಿಬೆಟ್ಟು, ಉಡುಪಿ.



ನಿಮ್ಮ ಪ್ರೀತಿಯ ಧಾರೆಯನ್ನು ಎರೆದು, ನಮ್ಮ ಜೀವನಕ್ಕೆ ರೂಪು ನೀಡಲು ಕಾರಣರಾದ, ವೈವಾಹಿಕ ಜೀವನದ 50 ಸಂವತ್ಸರಗಳನ್ನು ಕಳೆದ ಈ ಸಂದರ್ಭದಲ್ಲಿ ತಮ್ಮ ಜೀವನದ ಮುಂದಿನ ಕ್ಷಣಗಳು ಸವಿಯಾಗಿರಲಿ; ಆರೋಗ್ಯವಂತರಾಗಿ ಸುಖ ಸಂತೋಷದಿಂದ ಇನ್ನೂ ನೂರ್ಕಾಲ ಬಾಳುವಂತೆ ಆಗಲಿ ಎಂದು ಪ್ರಾರ್ಥಿಸುವ.

ಶ್ರೀಮತಿ ಪ್ರಜ್ವಲಾ ಮತ್ತು ಶ್ರೀ ಉಮೇಶ್ ರಾವ್ ಕಟಪಾಡಿ, ಕುಂಜಿಬೆಟ್ಟು ಉಡುಪಿ (ಸಹೋದರ)
ಶ್ರೀಮತಿ ಆಶಾ ಸುಭಾಸ್ ರಾವ್ ಇಸ್ಲಾಂಪುರ (ಮಗಳು) ; ಶ್ರೀಮತಿ ಅನಿತಾ ದಲಾಲ್, ಮುಂಬೈ (ಮಗಳು)
ಶ್ರೀಮತಿ ಸಂಪದಾ ವಿದ್ಯಾಧರ ದೇಸಾಯಿ ಕೋಲ್ಹಾಪುರ (ಮಗಳು) ; ಶ್ರೀಮತಿ ಅಂಜನಾ ವಿಶ್ವನಾಥ ರಾವ್ ಕುಡಾಲ್ (ಮಗಳು)
ಮೊಮ್ಮಕ್ಕಳು ಹಾಗೂ ಬಂಧುಮಿತ್ರರು

## ಶ್ರೀ ಪ್ರಭಾಕರ್ ರಾವ್ ಮತ್ತು ಶ್ರೀಮತಿ ಗೀತಾ



ವಿವಾಹದ 35ನೇ ವರ್ಷದ ಶುಭಾಶಯಗಳನ್ನು ಕೋರುವ,

ಶ್ರೀಮತಿ ಸೌಮ್ಯಾ ಕಿರಣ್ ರಾವ್ ; ಶ್ರೀಮತಿ ರಮ್ಯ ಚೈತನ್ಯ ರಾವ್ (ಮಕ್ಕಳು)
ಪುತ್ತೂರು ಕಿರಣ್ ಎಂ.ಜಿ. ; ಕೊಕ್ರಾಡಿ ಚೈತನ್ಯ ರಾವ್ (ಅಳಿಯಂದಿರು)
ಪ್ರಣವ್ ರಾವ್, ದಿವಿಜ್ (ಮೊಮ್ಮಕ್ಕಳು)

## ಶ್ರೀ ಬಿ. ಪ್ರಕಾಶ್ ರಾವ್ ಮತ್ತು ಶ್ರೀಮತಿ ಲತಾ ಪ್ರಕಾಶ್ ರಾವ್



ವಿವಾಹದ ರಜತಮಹೋತ್ಸವದ ಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ,

ಶ್ರೀ ಬಿ. ಜಯರಾಮ ರಾವ್ ಹಾಗೂ ಶ್ರೀಮತಿ ವೀಣಾ ಜೆ. ರಾವ್
ಶ್ರೀ ಬಿ. ರಾಜಾ ರಾವ್, ಶ್ರೀಮತಿ ರಾಜೇಶ್ವರಿ ಶ್ಯಾನುಭಾಗ್, ಶ್ರೀಮತಿ ರಮಾಮಣಿ ಟಿ.ಸಿ.ರಾವ್
ಶ್ರೀ ವೈ. ಮೋಹನ್ ರಾವ್

## ಶ್ರೀ ಹೆರ್ಗ ನಿರಂಜನ್ ರಾವ್ ಮತ್ತು ಶ್ರೀಮತಿ ಶ್ರೀಮತಿ ರಾವ್



70 ಸಂವತ್ಸರಗಳನ್ನು ಪೂರ್ಣಗೊಳಿಸಿದ ತೀರ್ಥರೂಪರಿಂದ ಆಶೀರ್ವಾದ ಕೋರುವ,

ಶ್ರೀ ನಿಶಿತ್ ರಾವ್, ಶ್ರೀಮತಿ ರೇಷ್ಮಾ ರಾವ್
ಶ್ರೀಮತಿ ನೀತಾ ಮತ್ತು ಶ್ರೀ ಪ್ರಸಾದ್ ರಾವ್
ಶ್ರೀಮತಿ ನೀನಾ ಮತ್ತು ಶ್ರೀ ರಾಜಾರಾಮ ರಾವ್
ಕು। ಶ್ರೇಷ್ಠಾ, ಮಾ। ನಿದೀಶ್, ಕು। ಅದ್ವಿತಿ


ಸುಬ್ರಹ್ಮಣ್ಯ ಸಭಾದಲ್ಲಿ ಶಂಕರ ಜಯಂತಿ


ಕಟೀಲು ಮೇಳದ ಯಕ್ಷಗಾನದಲ್ಲಿ ಸನ್ಮಾನ



ಮಾರ್ಪಳ್ಳಿ ಆರ್. ಮಂಜುನಾಥ್‌ಗೆ ಪ್ರಶಸ್ತಿ


ರಾಯಿ ರಾಜ್‌ಕುಮಾರ್‌ರವರಿಗೆ ಸಂಮ್ಮಾನ

ಶೃಂಗೇರಿಯಲ್ಲಿ ಶಂಕರತತ್ವ ಅಭಿಯಾನಂನ ಉಡುಪಿಯ ಸದಸ್ಯರು


ಪಾದೆಬೆಟ್ಟಿನಲ್ಲಿ ಶಂಕರ ಜಯಂತಿ




**ಮಾ| ವಿವಾನ್‌ನಿಗೆ**

**ಹುಟ್ಟು ಹಬ್ಬದ ಶುಭಾಶಯಗಳು**

ಶ್ರೀ ದೀಪಕ್ ರಾವ್ ಮತ್ತು ಪ್ರಿಯಾ ಭಾಗವತ್
ಶ್ರೀ ವೈ. ಮೋಹನ್ ರಾವ್
ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಪ್ರಕಾಶ್ ಭಾಗವತ್




ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551

# ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


# ವೈವಾಹಿಕ ಜೀವನದ ನಲವತ್ತರ ಸಂಭ್ರಮ



**ಶ್ರೀ ಪರಮೇಶ್ವರ ಹೆಬ್ಬಾರ್ - ಶ್ರೀಮತಿ ಹೇಮಾವತಿ ಹೆಬ್ಬಾರ್**

ಪಾಂಚಜನ್ಯ, ವೇಗಾಸ್ ಟೌನ್‌ಶಿಪ್, ಕಿನ್ನಿಮೂಲ್ಕಿ, ಉಡುಪಿ

**ಸುಮಧುರ ದಾಂಪತ್ಯ ಜೀವನದ ನಲವತ್ತು ವರುಷ ಮಹೋತ್ಸವದ ಸಂಭ್ರಮದಲ್ಲಿರುವ** ನಿಮಗೆ ಶ್ರೀ ದೇವರು ಆಯುರಾರೋಗ್ಯ, ಸುಖಶಾಂತಿ, ಸಂಪತ್ತು, ನೆಮ್ಮದಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ

ಶ್ರೀ ರಾಘವೇಂದ್ರ ಹೆಬ್ಬಾರ್ (ಮಗ)
ಶ್ರೀಮತಿ ಸಂಗೀತ ರಾಘವೇಂದ್ರ ಹೆಬ್ಬಾರ್ (ಸೊಸೆ)
ಸಾನಿಧ್ಯ (ಮೊಮ್ಮಗಳು)
ಶ್ರೀ ರವೀಂದ್ರ ಹೆಬ್ಬಾರ್ (ಮಗ)
ಶ್ರೀಮತಿ ಪ್ರಜ್ವಲ ರವೀಂದ್ರ ಹೆಬ್ಬಾರ್ (ಸೊಸೆ) ಆಧ್ಯಾ (ಮೊಮ್ಮಗಳು)
ಹಾಗೂ ಬಂಧುಮಿತ್ರರು


**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org